ಐತಿಹಾಸಿಕ ಜಾಥಾ: ಹೋರಾಟಕ್ಕೆ ಮುನ್ನಡೆ

ಮಾರ್ಚಿ 30ರ ರಾತ್ರಿ ನಡೆದ ಹುಣಸಿಕೋಟೆಯ ಬಡ ಕುಂಬಾರ ಶೇಷಗಿರಿಯಪ್ಪನ ಭೀಕರ ಕೊಲೆ ಎಲ್ಲಾ ಜಾತಿಯ ದುಡಿಯುವ ಬಡವರ ಕೊಲೆಯ ಸಂಕೇತ. ಇಂಥ ಕೊಲೆ ಸುಲಿಗೆಗಳ ವಿರುದ್ಧ ಎಲ್ಲಾ ಜಾತಿಯ ಬಡವರನ್ನು ಅಸ್ಪೃಶ್ಯ ದಲಿತರ ಮುಂದಾಳತ್ವದಲ್ಲಿ ಸಂಘಟಿಸಿ ಹೋರಾಡುವ ನಿಲುವು ತಳೆದಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹುಣಸಿಕೋಟೆಯಿಂದ ಬೆಂಗಳೂರಿಗೆ ನಡೆಸಿದ ಕಾಲುನಡಿಗೆಯ ಜಾಥಾ ಸಂಪೂರ್ಣ ಯಶಸ್ವಿಯಾಯಿತು. ಸರ್ಕಾರ ಪೋಲೀಸು ಕೋರ್ಟುಗಳನ್ನು ಬೆರಳಲ್ಲಿ ಆಡಿಸುವಂಥ ಭಾರಿ ಜಮೀನ್ದಾರ ಕ್ರೂರ ಕೃಷ್ಣೆಗೌಡ ಇದುವರೆಗೆ ನಡೆಸಿರುವ ಹಲವಾರು ಕೊಲೆಗಳು ಮುಚ್ಚಿಹೋಗಿವೆ. ಆದರೆ ದಲಿತ ಸಂಘರ್ಷ ಸಮಿತಿಯಿಂದಾಗಿ ಕರ್ನಾಟಕದ ಎಲ್ಲಾ ಜನತೆಯ ಮುಂದೆ ಬಹಿರಂಗಗೊಂಡು ಚಿಂತಿಸಲು ಹಚ್ಚಿರುವ ಶೇಷಗಿರಿಯಪ್ಪನ ಕೊಲೆ, ಶೋಷಕ ಮತ್ತು ಶೋಷಿತರ ನಡುವಿನ ಹೋರಾಟದ ಪ್ರಾರಂಭದ ಹಂತವಾಗಬೇಕಾಗಿದೆ. ಒಂದು ಕಡೆ ದಲಿತೋದ್ಧಾರ ಹೇಳುತ್ತಾ ಇನ್ನೊಂದು ಕಡೆ ನ್ಯಾಯಕೇಳುವ ದಲಿತರ ಮೇಲೆ ಲಾಠಿ ಬೀಸುವ, ಜಮೀನ್ದಾರರು ಮತ್ತು ಸಾವುಕಾರರ ಹಿತಕಾಯುವ ದಲಿತವಿರೋಧಿ ಸರ್ಕಾರಗಳ ವಿರುದ್ಧ ತುಳಿತಕ್ಕೊಳಗಾದ ಎಲ್ಲಾ ಜಾತಿಯ ಬಡವರು ಒಂದಾಗಿ ಹೋರಾಡುವ ಕಾಲ ಈಗ ಬಂದಿದೆ.

ಕೃಷ್ಣೆಗೌಡನ ದಬ್ಬಾಳಿಕೆಯಲ್ಲಿ ಮುಚ್ಚಿಹೋಗಿರುವ ಲೆಕ್ಕವಿಲ್ಲದಿರುವಷ್ಟು ಕೊಲೆಗಳು, ಅತ್ಯಾಚಾರಗಳು, ಬಡವರ ಭೂಮಿ ಕಸಿದುಕೊಂಡಿರುವ ನೂರಾರು ಪ್ರಕರಣಗಳು ದಲಿತ ಸಂಘರ್ಷ ಸಮಿತಿಯ ಜಾಥಾದಿಂದ ಬೆಳಕು ಕಂಡಿವೆ. ಈ ಕರಾಳ ಇತಿಹಾಸವನ್ನು ಸರ್ಕಾರ ಕೂಡಲೆ ತನಿಖೆ ನಡೆಸಿ ಜನತೆಯ ಮುಂದೆ ಕೃಷ್ಣೇಗೌಡನ ನಿಜರೂಪವನ್ನು ಬಯಲು ಮಾಡದಿದ್ದರೆ ದಲಿತ ಸಂಘರ್ಷ ಸಮಿತಿ ಜನತೆಯ ನಡುವೆ ತನ್ನದೆ ರೀತಿಯ ತನಿಖೆ ನಡೆಸಿ ಬಯಲುಮಾಡುವ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದೆ.

ಇಂಥ ಹೋರಾಟಗಳ ಮುನ್ನಡೆಯಿಂದ ಶೋಷಣೆಯಿಂದ ಜಿಡ್ಡುಗಟ್ಟಿರುವ ಇಂಡಿಯಾದ ನೆಲ ನಡುಗುತ್ತದೆ. ಆಗ ಮಾತ್ರ ಮಾನವೀಯ ಹೊಸ ಸಮಾಜ ಸೃಷ್ಟಿಯಾಗುತ್ತದೆ.



ಕೊಲೆಗೀಡಾದ ತಂದೆ ಶೇಷಗಿರಿಯಪ್ಪನ ಜ್ಯೋತಿ ಹಿಡಿದು ಜಾಥಾದಲ್ಲಿ ಮುನ್ನಡೆದ ಅತ್ಯಾಚಾರಕ್ಕೆ ಒಳಗಾದ ಹುಣಸೀಕೋಟೆಯ ಅನಸೂಯಮ್ಮ

ಪಂಚಮ

ಸಂಪುಟ: 4 ಸಂಚಿಕೆ: 10, 20, ಜೂನ್ 1980 ಪಾಕ್ಷಿಕ ಬೆಲೆ: 30 ಪೈಸೆ

ಬಡವರ ಮೇಲಿನ ಕೊಲೆ ಸುಲಿಗೆಗಳನ್ನು ತಪ್ಪಿಸಿ ಎಂದು ವಿಧಾನ ಸೌಧದತ್ತ ಹೆಜ್ಜೆ ಇಟ್ಟ 'ಮಹಾ ಅಪರಾಧಕ್ಕಾಗಿ' ಲಾಠಿ ಏಟು. ಪೋಲೀಸರ ಲಾಠಿ ಏಟುಗಳಿಗೆ ಅಂಜದೆ "ರಕ್ತವನ್ನು ಚೆಲ್ಲುತ್ತೇವೆ, ನ್ಯಾಯವನ್ನು ಪಡೆಯುತ್ತೇವೆ" ಎಂದು ಮುನ್ನುಗ್ಗಿ ಬಂಧಿತರಾದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರಿಂದ ನ್ಯಾಯಕ್ಕಾಗಿ ಆಗ್ರಹಿಸಲು ಮತ್ತೆ ಸತತ ಹೋರಾಟ ಆರಂಭದ ನಿರ್ಧಾರ. ಲಾಠಿ ಪ್ರಹಾರ ನಡೆದ ಕಬ್ಬನ್ ಪಾರ್ಕ್ ಜಾಗದಿಂದಲೇ ಮತ್ತೆ ಸದ್ಯದಲ್ಲೇ ಹೋರಾಟ ಆರಂಭ.

ದ. ಸಂ. ಸ. ದಿಂದ ಮತ್ತೆ ರ‍್ಯಾಲಿ

ಸುಮಾರು 10 ದಿನಗಳ ಕಾಲ ಬೆಂಗಳೂರಿನ ಅನೇಕ ಬಡಾವಣೆ ಮತ್ತು ಪ್ರಮುಖ ಸ್ಥಳಗಳಲ್ಲಿ 'ಶೇಷಗಿರಿಯಪ್ಪನ ಕಗ್ಗೊಲೆ' ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು. ನಂತರ ಜುಲೈ ತಿಂಗಳ ಮಧ್ಯಭಾಗದಲ್ಲಿ ಎಲ್ಲ ಪ್ರಗತಿಪರ ಸಂಘಟನೆಗಳ ಬೆಂಬಲದೊಡನೆ ಸಂಘರ್ಷ ಸಮಿತಿ ವಿಧಾನಸೌಧದವರೆಗೆ ಭಾರಿ ಪ್ರಮಾಣದಲ್ಲಿ ಪೋಲೀಸ್ ದೌರ್ಜನ್ಯ ವಿರುದ್ಧ ಪ್ರತಿಭಟನಾ ರ‍್ಯಾಲಿ ವ್ಯವಸ್ಥೆಗೊಳಿಸುತ್ತಿದೆ.

ಪೋಲೀಸು ದೌರ್ಜನ್ಯಕ್ಕೆ ವಿವಿಧ ಸಂಘಟನೆಗಳ ಖಂಡನೆ

ಧಾರವಾಡ, ದಾವಣಗೆರೆ ಮತ್ತಿತರ ಅನೇಕ ಕಡೆ ದಲಿತ ಸಂಘರ್ಷ ಸಮಿತಿ ಶಾಖೆಗಳು ಪ್ರತಿಭಟನೆ ಮೆರವಣಿಗೆ ನಡೆಸಿ ಪೋಲೀಸ್ ದೌರ್ಜನ್ಯ ಖಂಡಿಸಿದ ವರದಿಗಳು ಬಂದಿವೆ.

ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ಮತ್ತು ಜಾಥಾ ವರದಿ ಮಾಡಲು ಬಂದಿದ್ದ ಪ್ರಜಾವಾಣಿ ವರದಿಗಾರ ಇಂದೂಧರ ಹೊನ್ನಾಪುರ ಅವರ ಮೇಲೆ ನಡೆದ ಅಮಾನುಷ ಪೊಲೀಸ್ ದೌರ್ಜನ್ಯವನ್ನು ಅನೇಕ ಪ್ರಗತಿಪರ ಸಂಘಟನೆಗಳು ಮತ್ತು ಕೆಲವು ಪ್ರಮುಖರು ಪ್ರತ್ಯೇಕ ಹೇಳಿಕೆಗಳನ್ನು ನೀಡಿ ಖಂಡಿಸಿದ್ದಾರೆ.

ಸಿ. ಪಿ. ಎಂ., ಸಿ. ಪಿ. ಐ ನ ಬೆಂಗಳೂರು ಜಿಲ್ಲಾ ಮಂಡಲಿ, ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ, ಬೆಂಗಳೂರು ಜಿಲ್ಲಾ ರೈತ ಸಂಘ, ಹಿಂದ್ ಮಜ್ದೂರ್ ಸಭಾ. ಎಸ್. ಎಫ್. ಐ, ಅಖಿಲ ಭಾರತ ಕೆನರಾ ಬ್ಯಾಂಕ್ ಹರಿಜನ, ಗಿರಿಜನ ನೌಕರರ ಸಂಘ, ಸಮಾಜವಾದಿ ಯುವಜನ ಸಭಾ, ಕನ್ನಡ ಸಂಘರ್ಷ ಸಮಿತಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ. ಶಾಸಕರಾದ ಎಸ್. ವೆಂಕಟರಾಮ್, ಎಂ. ಚಂದ್ರಶೇಖರ್ ಮತ್ತು ಡಾ॥ ಜಿ. ರಾಮಕೃಷ್ಣ ಅವರು ಖಂಡಿಸಿದ್ದಾರೆ.

ಜೂನ್ 11ರಿಂದ ಮೂರು ದಿನ ನಡೆದ ಅಖಿಲ ಭಾರತಮಟ್ಟದ 'ಸಮತಾ ಸಮ್ಮೇಳನ'ದ ಸದಸ್ಯರು ಜೂನ್ 14 ರಂದು ವಿಧಾನಸೌಧದವರೆಗೆ ಪ್ರತ್ಯೇಕ ಮೆರವಣಿಗೆ ನಡೆಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ನಡೆದ ಪೊಲೀಸ್ ದೌರ್ಜನ್ಯವನ್ನು ಖಂಡಿಸಿದರು.

ಲಂಕೇಶ್ ಪ್ರತಿಭಟನೆ

"ದಲಿತರ ಬಗ್ಗೆ ಸರ್ಕಾರದ ಧೋರಣೆ ಇದೇ ರೀತಿ ಮುಂದುವರಿದಿದ್ದೇ ಆದರೆ ನಾವೂ ಬೀದಿಗೆ ಇಳಿಯಬೇಕಾದೀತು." ಎಂದು ಖ್ಯಾತ ಲೇಖಕರಾದ ಪಿ. ಲಂಕೇಶ್, ಚಂದ್ರಶೇಖರ ಪಾಟೀಲ ಮತ್ತು 'ಆಂದೋಲನ' ಸಂಪಾದಕ ರಾಜಶೇಖರಕೋಟಿ ಅವರು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ಪೋಲೀಸರು ನಡೆಸಿದ ಲಾಠಿ ಪ್ರಹಾರ ವಿರುದ್ಧ ಸರ್ಕಾರಕ್ಕೆ ಜೂನ್ 13ರಂದು ಪತ್ರಿಕಾಗೋಷ್ಠಿಯೊಂದರಲ್ಲಿ ಎಚ್ಚರಿಕೆ ಕೊಟ್ಟರು.

ಜಾಗೃತಿಯೇ ಜಾಥಾದ ಉದ್ದೇಶ

ಕೋಲಾರ ಜಿಲ್ಲಾ ಹುಣಸಿಕೋಟೆಯಿಂದ ಕಾಲುನಡಿಗೆ ಜಾಥಾದಲ್ಲಿ ಬೆಂಗಳೂರಿಗೆ ಬಂದಿದ್ದ (12-5-80) ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ಪೋಲೀಸರು ಲಾಠಿಪ್ರಹಾರ ಮಾಡಿದರು. ಆ ಬಗ್ಗೆ ಮುಖ್ಯಮಂತ್ರಿಗಳು ವಿಧಾನಮಂಡಲದಲ್ಲಿ ಕೊಟ್ಟ ಹೇಳಿಕೆಗಳು ಸತ್ಯದೂರ.

ಜಾಥಾದ ಉದ್ದೇಶ ಹುಣಸಿಕೋಟೆ ಶೇಷಗಿರಿಯಪ್ಪನ ಕೊಲೆ ಬಗ್ಗೆ ಜನಸಾಮಾನ್ಯರಲ್ಲಿ ಪ್ರಜ್ಞೆ ಮೂಡಿಸುವುದು, ಆ ಮೂಲಕ ಭೂಮಾಲೀಕರ, ಶ್ರೀಮಂತರ ದಬ್ಬಾಳಿಕೆಯ ವಿರುದ್ಧ ಬಡವರನ್ನು ಸಂಘಟಿಸುವುದಾಗಿತ್ತೇ ಹೊರತು, ಕೇವಲ ಮುಖ್ಯಮಂತ್ರಿಗಳನ್ನು ಭೇಟಿಮಾಡುವುದು ಮನವಿ ಅರ್ಪಿಸುವುದು ಮಾತ್ರ ಆಗಿರಲಿಲ್ಲ ಆದ್ದರಿಂದ ಈ ಮುಂಚೆ ನಾವು ಮುಖ್ಯಮಂತ್ರಿಗಳನ್ನು ಮನವಿ ಅರ್ಪಿಸುತ್ತೇವೆಂದು ಕೇಳಿಕೊಂಡಿರಲಿಲ್ಲ. ಜಾಥಾದಲ್ಲಿ ಹೋಗಿ ಮನವಿ ಕೊಟ್ಟುಬಿಡುವ ಎಂದು ಭಾವಿಸಿದ್ದೆವು. ಮಧ್ಯಾಹ್ನ 11ಗಂಟೆಯ ಹೊತ್ತಿಗೆ ನಮ್ಮ ಜಾಥಾ ಅಲಸೂರನ್ನು ತಲುಪಿತು ಆಗ ಮುಖ್ಯಮಂತ್ರಿಗಳು ನಿಮಗೆ 11-30ಕ್ಕೆ ಸಮಯಕೊಟ್ಟಿದ್ದಾರೆಂತಲೂ, ಅಷ್ಟರಲ್ಲೆ ಅವರನ್ನು ಭೇಟಿಮಾಡಬೇಕೆಂತಲೂ ಪೋಲೀಸರು ತಿಳಿಸಿದರು.

ಸುಮಾರು 2 ಗಂಟೆಯ ಹೊತ್ತಿಗೆ ನಮ್ಮ ಜಾಥಾ ವಿಧಾನಸೌಧವನ್ನು ತಲುಪಿತು. ಬಹಿರಂಗ ಸಭೆ ಆರಂಭವಾಗಿತ್ತು. ಅದರ ಅಧ್ಯಕ್ಷತೆಯನ್ನು ನಾನೇ ವಹಿಸಿದ್ದೆ. ಆಗ 3-45 ಹೊತ್ತಿಗೆ ಸಭಾಪತಿಗಳು 4-10ರಿಂದ 4-30ರವರೆಗಿನ ಅವಧಿಯಲ್ಲಿ ತಮ್ಮನ್ನು ಭೇಟಿಮಾಡಬಹುದೆಂದು ಆದೇಶ ಕಳಿಸಿದ್ದರು. ಆಗಲೇ ನಾವು ಸಭಾಪತಿಗಳನ್ನು ಮುಖ್ಯಮಂತ್ರಿಗಳನ್ನು ಚೀಫ್ ಸೆಕ್ರೆಟರಿಯವರನ್ನು ನೋಡಲು ಯತ್ನಿಸಿದೆವು. ಅದು ಸಾಧ್ಯವಾಗಲಿಲ್ಲ. ಅರ್ಧ ಗಂಟೆಯವರೆಗೂ ಅಲ್ಲೆ ಕಾದಿದ್ದೆವು. ನಂತರ ಮುಖ್ಯಮಂತ್ರಿಗಳಾಗಲಿ, ಸಭಾಪತಿಗಳಾಗಲಿ, ಇಂದು ಸಿಕ್ಕುವುದಿಲ್ಲ. ನಾಳೆ ಬೆಳಿಗ್ಗೆ 9 ಗಂಟೆಗೆ ಭೇಟಿಮಾಡಿ ಎಂದು ಪೋಲೀಸರು ಹೇಳಿದರು. ವಸ್ತುಸ್ಥಿತಿ ಹೀಗಿರುತ್ತೆ, ಮುಖ್ಯಮಂತ್ರಿಗಳು ನಮ್ಮನ್ನು ನೋಡಲು ಬಂದವರು ಅರ್ಧಗಂಟೆ ಕಾಯಬಹುದಿತ್ತು ಎಂಬ ಹೇಳಿಕೆ ಆಶ್ಚರ್ಯಕರವಾಗಿದೆ.

ನಮ್ಮ ಜಾಥಾದಲ್ಲಿ ಬೇರೆ ಯಾವ ರಾಜಕೀಯ ಪಕ್ಷ ಅಥವಾ ಗುಂಪಿನ ಜನರನ್ನು ಸೇರಿಸಿರಲಿಲ್ಲ ಬ್ಯಾಡ್ಜ್ ಇಲ್ಲದವರನ್ನು ಜಾಥಾದ ಸಾಲಿನಲ್ಲಿ ಸೇರಲು ಬಿಡುತ್ತಿರಲಿಲ್ಲ. ಇಷ್ಟು ವ್ಯವಸ್ಥಿತ ಶಿಸ್ತನ್ನು ಪಾಲಿಸಿದ ಸಂಘರ್ಷ ಸಮಿತಿ ಜಾಥಾದಲ್ಲಿ ಕೇವಲ 150 ಜನ ಮಾತ್ರ ಇದ್ದು ಅವರೊಂದಿಗೆ 100 ಜನ ಪ್ರಚೋದಕರು ಸೇರಿಕೊಂಡರು ಎಂದು ಮುಖ್ಯಮಂತ್ರಿಗಳು ಹೇಳಿರುವುದು ಸತ್ಯಕ್ಕೆ ದೂರ. ಸಭೆಯ ನಂತರ ವಿಧಾನಸೌಧಕ್ಕೆ ಹೊರಟೆವು ನಿಷೇಧಾಜ್ಞೆ ಜಾರಿಯಲ್ಲಿರುವ ಪ್ರದೇಶವನ್ನು ತಲುಪಿಯೇ ಇರಲಿಲ್ಲ, ಮಧ್ಯದಲ್ಲೆ ಪೊಲೀಸರು ತಡೆದು ಲಾಠಿಪ್ರಹಾರ ಮಾಡಿದರು. ಬರಿ ನಾಲ್ಕು ಜನರಿಗೆ ಗಾಯಗಳಾಗಿವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ 9 ಜನರಿಗೆ ಗಾಯಗಳಾಗಿವೆ. ತನಗೆ ಪೋಲೀಸರು ಹೊಡೆಯಲಿಲ್ಲವೆಂದು ಅನಸೂಯಮ್ಮನೇ ವೈದ್ಯರ ಹತ್ತಿರ ಹೇಳಿದ್ದಾಳೆಂದು ಆರೋಪಿಸಲಾಗಿದೆ. ಇದು ಸುಳ್ಳು. ನೂಕಾಟದಲ್ಲಿ ಕೆಳಗೆ ಬಿದ್ದ ಅನಸೂಯಮ್ಮನನ್ನು ಪುರುಷ ಪೊಲೀಸರು ಬೂಟಿನಿಂದ ಒದ್ದು ಎಳೆದು ವ್ಯಾನಿನಲ್ಲಿ ಹಾಕಿದರು. ಪತ್ರಕರ್ತರಾಗಿ ಇಂದೂಧರ ಹೊನ್ನಾಪುರ ಅವರು ನಮ್ಮಿಂದ ಮಾಹಿತಿಗಳನ್ನು ಸಂಗ್ರಹಿಸಿದರೆ ವಿನಾ ಪ್ರಚೋದನೆ ಮಾಡಲಿಲ್ಲ. ಇಂಥ ವಿಷಯಗಳಲ್ಲಿ ದ. ಸಂ. ಸಕ್ಕೆ ತನ್ನದೆ ನೀತಿ ಇದೆ. ಅವರು ನಮ್ಮ ಮೆರವಣಿಗೆಯಲ್ಲಿ ಭಾಗವಹಿಸಿರಲಿಲ್ಲ. ದೂರದಲ್ಲಿ ನಿಂತಿದ್ದ ಅವರ ಮೇಲೆ ಎ. ಸಿ. ಪಿ. ರಜಪೂತ್ ಅವರು ಲಾಠಿಪ್ರಹಾರ ಮಾಡಿದ್ದಾರೆ. ಲಾಠಿಪ್ರಹಾರ ಪ್ರಕರಣ ಕುರಿತು ನ್ಯಾಯಾಂಗ ತನಿಖೆ, ಕೇಸುಗಳ ವಾಪಸ್ಸು, ತನಿಖೆ ಮುಗಿಯುವವರೆಗೆ ಲಾಠಿಪ್ರಹಾರಕ್ಕೆ ಆಜ್ಞೆನೀಡಿದ ಎ. ಸಿ. ಪಿ. ರಜಪೂತ್‌ರವರ ಸಸ್ಪೆನ್ಷನ್, ಪೊಲೀಸರು ಒಯ್ದಿರುವ ಪ್ರದರ್ಶನಕಾರರ ವಸ್ತುಗಳ ವಾಪಸಾತಿ-ಈ ಬೇಡಿಕೆಗಳ ಬಗೆಗೆ ಗಂಭೀರ ತೀರ್ಮಾನ ಕೈಗೊಳ್ಳದ ಹೊರತು ಮುಖ್ಯಮಂತ್ರಿಗಳ ಜತೆ ಮಾತುಕತೆ ಸಾಧ್ಯವಿಲ್ಲ.

ಬಿ. ಕೃಷ್ಣಪ್ಪ, ರಾಜ್ಯ ಸಂಚಾಲಕ
ಕರ್ನಾಟಕ ದಲಿತ ಸಂಘರ್ಷ ಸಮಿತಿ

ಸಂಘರ್ಷ ಸಮಿತಿ ಹೋರಾಟ ಬೆಂಬಲಿಸಿ ಮಳವಳ್ಳಿಯಲ್ಲಿ ದಲಿತರ ಪ್ರದರ್ಶನ

ಹುಣಸಿಕೋಟೆಯಿಂದ ಜೂನ್ 12 ರಂದು ಬೆಂಗಳೂರಿಗೆ ಕಾಲ್ನಡಗೆ ಜಾಥಾ ಬಂದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ನಡೆದ ಅವಮಾನುಷ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ಮಳವಳ್ಳಿ ದಲಿತ ವಿದ್ಯಾರ್ಥಿ ಕೂಟವು ಜೂನ್ 16ರಂದು ಮಳವಳ್ಳಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿತು.

ಕೊಲೆಗಡುಕರನ್ನು ಬಂಧಿಸದೆ ನ್ಯಾಯಕೇಳಲು ಬಂದ ದಲಿತರನ್ನೇ ಬಂಧಿಸಿದ ಸರ್ಕಾರದ ಕ್ರಮವನ್ನು ಖಂಡಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಪ್ರದರ್ಶನ ನಡೆಸಲಾಯಿತು.

ಹುಣಸಿಕೋಟೆಯ ಒಡಕುಂಬಾರ ಶೇಷಗಿರಿಯಪ್ಪನ ಕೊಲೆಗೈದ ಕೊಲೆಗಡುಕ ಕೃಷ್ಣೇಗೌಡ ಮತ್ತು ಆತನ ಇತರ ಗೂಂಡಾಗಳಿಗೆ ನೀಡಿರುವ ಜಾಮೀನು ರದ್ದುಗೊಳಿಸಿ, ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲಿನ ಪೊಲೀಸ್ ಲಾಠಿಪ್ರಹಾರ ಕ್ರಮವನ್ನು ತನಿಖೆ ನಡೆಸಿ, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮಕೈಗೊಳ್ಳಬೇಕೆಂಬ ಮನವಿಯ ಪ್ರತಿಭಟನಾ ಪತ್ರವನ್ನು ಸರ್ಕಾರದ ಗಮನಕ್ಕೆ ತರುವಂತೆ ತಹಸಿಲ್ದಾರರಿಗೆ ಸಲ್ಲಿಸಲಾಯಿತು.



'ಭೂಕಂಪನಗಳ ಭಾಷೆಗಳೊಂದಿಗೆ' 70 ಕಿ. ಮೀ. ಕಾಲ್ನಡಿಗೆಯಲ್ಲಿ ಬಂದು ಬೆಂಗಳೂರಿನಲ್ಲಿ ಕಾಣಿಸಿಕೊಂಡ ಜಾಥಾ

ಗುಂಡೂರಾವ್ ಹೇಳಿಕೆ ಖಂಡಿಸಿ ವಿಧಾನಪರಿಷತ್ತಿನಲ್ಲಿ ಸಭಾತ್ಯಾಗ

ಸುಮಾರು 70 ಕಿ.ಮೀ. ದೂರದ ಹುಣಸಿಕೋಟೆಯಿಂದ ಬೆಂಗಳೂರಿಗೆ ಕಾಲ್ನಡಗೆಯಲ್ಲಿ ಜಾಥಾ ಬಂದು ನ್ಯಾಯ ಕೇಳಿದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ಪೋಲೀಸರು ಅವಮಾನುಷವಾಗಿ ಲಾಠಿ ಪ್ರಹಾರ ನಡೆಸಿದುದು ಖಂಡನೀಯ. ಪೋಲೀಸರ ಈ ದೌರ್ಜನ್ಯದ ಬಗ್ಗೆ ನ್ಯಾಯಾಂಗತನಿಖೆ ಅಥವಾ ಶಾಸಕರಸಮಿತಿಯೊಂದರಿಂದ ವಿಚಾರಣೆ ನಡೆಸಬೇಕೆಂಬ ತಮ್ಮ ಬೇಡಿಕೆಗೆ ನಕಾರ ಸೂಚಿಸಿದ ಗುಂಡೂರಾವ್ ಸರ್ಕಾರದವಿರುದ್ಧ ಪ್ರತಿಭಟಿಸಿ ಜೂನ್ 13ರಂದು ಪ್ರಧಾನ ಪರಿಷತ್ತಿನ ವಿರೋಧಿ ಸದಸ್ಯರು ಸಭಾತ್ಯಾಗ ಮಾಡಿದರು.

ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲಿನ ಪೋಲೀಸ್ ದೌರ್ಜನ್ಯದ ಬಗ್ಗೆ ವಿಧಾನ ಸಭೆಯಲ್ಲೂ ಪ್ರಸ್ತಾಪ. ಪೋಲೀಸರ ಪಾಶವೀ ಕೃತ್ಯದ ಬಗ್ಗೆ ತೀವ್ರ ಖಂಡನೆ–ಪ್ರತಿಭಟನೆಯ ಸುರಿಮಳೆ.

ಪೋಲೀಸರ ಹೇಯ ಕೃತ್ಯವನ್ನು ಸಮರ್ಥಿಸಿಕೊಂಡ ಮುಖ್ಯಮಂತ್ರಿ ಗುಂಡೂರಾವ್ ಕ್ರಮವನ್ನು ಉಭಯ ಸದನಗಳಲ್ಲೂ ವಿರೋಧಿ ಸದಸ್ಯರು ಪ್ರತಿಭಟಿಸಿದರು.

ಹುಣಸೀಕೋಟೆ ಕೊಲೆಗೂ ಸರ್ಕಾರಕ್ಕೂ ಏನು ಸಂಬಂಧ

—ಗುಂಡೂರಾವ್

ದಲಿತ ಸಂಘರ್ಷ ಸಮಿತಿಯವರ ಮೇಲೆ ನಡೆದಿರುವ ಹಲ್ಲೆ ಪ್ರಕರಣವನ್ನು ಲಘುವಾಗಿ ತೆಗೆದುಕೊಳ್ಳಬಾರದು.


—ಬಿ. ವಿ. ಕಕ್ಕಿಲಾಯ

ದಲಿತರು ಇನ್ನೆಷ್ಟು ಕಾಲ ಅಹಿಂಸೆಯಿಂದ ಇರಬೇಕು?

—ಬಸವಲಿಂಗಪ್ಪ

ಹುಣಸೀಕೋಟೆಯಲ್ಲಿ ಮಾರ್ಚ್ 30 ರಂದು ಶೇಷಗಿರಿಯಪ್ಪನ ಕುಟುಂಬದ ಮೇಲೆ ನಡೆದ ದೌರ್ಜನ್ಯಕ್ಕೂ ಏನ್ನ ಇಲ್ಲಿ ನಡೆದ ಪೋಲೀಸ್ ದೌರ್ಜನ್ಯಕ್ಕೂ ಸಂಬಂಧ ಇದೆ.

—ಲಕ್ಷ್ಮಿಸಾಗರ್



ಪೋಲೀಸರ ಅಮಾನುಷ ಲಾಠಿ ಏಟಿನಿಂದ ಗಾಯಗೊಂಡ 9 ಜನರಲ್ಲಿ ಕೋಲಾರ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತ ಪಾಪಣ್ಣ ಅಂಬೇಡ್ಕರ್

ಕೊಲೆ ಸುಲಿಗೆಗಳ ವಿರುದ್ಧ ಊರೂರು

ಕೊಲೆ ಸುಲಿಗೆ ದಬ್ಬಾಳಿಕೆಗಳಿಗೆ ಶರಣಾಗಿ ಮೌನ ತಾಳಿದ್ದ ಕೋಲಾರ-ಹುಣಿಸಿಕೋಟೆ ರಸ್ತೆ ಜೂನ್ 7 ರಂದು ದಲಿತ ಸಂಘರ್ಷ ಸಮಿತಿಯ ಕಪ್ಪು ಯುವಕರ ಘೋಷಣೆಗಳಿಂದ ತಲ್ಲಣಿಸ ತೊಡಗಿತು. ಕೋಲಾರದಿಂದ 9 ಕಿ ಮೀ. ದೂರಕ್ಕಿರುವ ಮುದುವತ್ತಿಯಲ್ಲಿ ಬಸ್ಸುಗಳಿಂದ ಗುಂಪು ಗುಂಪಾಗಿ ಇಳಿಯುತ್ತಿದ್ದ ಯುವಕ ಕಾರ್ಯಕರ್ತರನ್ನು ಮುದುವತ್ತಿಯ ಮುಗ್ಧ ಜನರು ಆಶ್ಚರ್ಯ-ಕುತೂಹಲದ ಕಣ್ಣುಗಳಿಂದ ಸ್ವಾಗತಿಸುತ್ತಿದ್ದರು. ಯುವಕರನ್ನು ಇಳಿಸಿದ ಸಪ್ಪೆಮೋರೆ ಬಸ್ಸುಗಳು ಹುಣಿಸೆಕೋಟೆ ಕಡೆಗೆ ಕೃಷ್ಣೇಗೌಡನಿಗೆ ವಿಷಯ ಮುಟ್ಟಿಸಲು ಎಂಬಂತೆ ಧಾವಿಸುತ್ತಿದ್ದವು. ಸುಮಾರು 10 ಘಂಟೆ ಸಮಯಕ್ಕೆ ಮುದುವತ್ತಿಯ ಊರ ಮಗ್ಗುಲಿನ ಮಾರಿಗುಡಿ ಅಂಗಳದಲ್ಲಿ ಸೇರಿದ್ದ ಭಾರಿ ಯುವಕರ ತಂಡದ ಜೊತೆ ಮುದುವತ್ತಿಯ ಇಡೀ ಜನಸಂಖ್ಯೆ ಸೇರಿಕೊಂಡು ಮಾರಿಗುಡಿ ಮನುಷ್ಯರಿಂದ ಮುಚ್ಚಿಹೋಗಿತ್ತು. 'ಇದೇನು ಯಾಕೆ?' ಇತ್ಯಾದಿ ಊರವರಿಂದ ಏಳುತ್ತಿದ್ದ ಪ್ರಶ್ನೆಗಳಿಗೆ ಕಪ್ಪು ಯುವಕರು ಪ್ರೀತಿಯಿಂದ ವಿವರಿಸತೊಡಗಿದರು. ವಿಷಯ ತಿಳಿದ ಬಡತನದ ಕೊಂಪೆ ಮುದುವತ್ತಿಯ ಬೀದಿಗಳಲ್ಲಿ ಕುತೂಹಲ ಹೆಮ್ಮೆ ಹತಾಶೆಗಳು ಗರಿಬಿಚ್ಚಿ ತಿರುಗಾಡ ತೊಡಗಿದವು.

ಯುವಕರ ನಡುವೆ ಎದ್ದು ನಿಂತ ಕೋಲಾರ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಸಿ. ಎಂ. ಮುನಿಯಪ್ಪ "ಶೇಷಗಿರಿಯಪ್ಪನನ್ನು ಕೊಂದ ಕೃಷ್ಣಗೌಡನಂಥ ಈ ದೇಶದ ಶೋಷಕರಿಗೆ ಬಡವರ ಪರವಾಗಿ ಎಚ್ಚರಿಕೆ ಹೇಳುವ ಸಲುವಾಗಿ ಈ ಕಾರ್ಯಕ್ರಮ" ಎಂದು ಹೇಳಿ ಎರಡು ದಿನಗಳ ಕಲಾ ಮಂಡಲಿಯ ಶಿಬಿರ ಮತ್ತು ತಾ. 9 ರಿಂದ 12ರವರೆಗೆ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಹೋಗುವ ಐತಿಹಾಸಿಕ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಕಾರ್ಯಕರ್ತರನ್ನು ಕುರಿತು ಮಾತನಾಡಿದ ಚಿಕ್ಕಮಗಳೂರು ಜಿಲ್ಲಾ ದಲಿತ ಸಂಘರ್ಷ ಸಮಿತಿಯ ರುದ್ರಸ್ವಾಮಿಯವರು ಈ ದೇಶದ ಜಾತೀಯತೆ, ಬಡತನ, ಶೋಷಣೆ ಇತ್ಯಾದಿ ರೋಗಗಳ ಬಗ್ಗೆ ದಲಿತ ಸಂಘರ್ಷ ಸಮಿತಿಯ ವಿಚಾರ ಮತ್ತು ನಿಲುವುಗಳನ್ನು ಈ ಜಾತಾದ ಮೂಲಕ ಜನತೆಗೆ ಮುಟ್ಟಿಸಬೇಕಾಗಿದೆ. ಎಲ್ಲಾ ಊರುಗಳಲ್ಲೂ ಇರುವ ಕೊಲೆಗಡುಕ ಜಮೀನ್ದಾರ ಕೃಷ್ಣೇಗೌಡರುಗಳನ್ನು ಜನತೆಯ ಮುಂದೆ ಎಳೆದು ತರಬೇಕಾಗಿದೆ" ಎಂದರು.

ಮುದುವತ್ತಿಯ ಮಾರಿಗುಡಿ ಮಗ್ಗುಲಲ್ಲೇ ಕೂತು ಊಟವಾಯಿತು. ಸಂಜೆ ನಾಲ್ಕು ಗಂಟೆವರೆಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಇನ್ನೂ ಕಾರ್ಯಕರ್ತರು ಬರುತ್ತಲೇ ಇದ್ದರು. ಮಧ್ಯಾನ್ಹ "ರಾಜಕೀಯ ಆಂದೋಳನದಲ್ಲಿ ಸಾಂಸ್ಕೃತಿಕ ಚಳುವಳಿಯ ಪಾತ್ರ"ದ ಬಗ್ಗೆ ಮಾತನಾಡಿದ ಗುಲ್ಬರ್ಗಾದ ಮಂಗ್ಳೂರ ವಿಜಯಾ ಅವರು "ಸಾಂಸ್ಕೃತಿಕ ಚಳುವಳಿಯು ಒಂದು ಮಾನಸಿಕ ಸಿದ್ಧತೆ ಅಥವಾ ಸಂಘಟನೆ. ಇದರ ಪರಿಣಾಮ ಕಣ್ಣಿಗೆ ಕಾಣದಿದ್ದರೂ ಇದು ಹೆಚ್ಚು ತೀವ್ರವಾಗಿರುತ್ತದೆ" ಎಂದ ಅವರು "ಭಾಷಣ ಸೋತಿರುವಲ್ಲಿ ಸಾಂಸ್ಕೃತಿಕ ಚಳುವಳಿ ಗೆಲ್ಲುತ್ತದೆ" ಎಂದರು. ನಂತರ ಈಗಾಗಲೇ ದಲಿತ ಸಂಘರ್ಷ ಸಮಿತಿಯ ಪ್ರಕಟಿಸಿರುವ ಹೋರಾಟದ ಹಾಡುಗಳನ್ನು ಅಭ್ಯಾಸ ಮಾಡಲು ಇಡೀ ಕಾರ್ಯಕರ್ತರನ್ನು ಐದು ವಿಭಾಗಗಳನ್ನಾಗಿ ಮಾಡಲಾಯಿತಲ್ಲದೆ 'ಶೇಷಗಿರಿಯಪ್ಪನ ಕಗ್ಗೊಲೆ' ನಾಟಕಕ್ಕಾಗಿ ಪಾತ್ರದಾರಿಗಳನ್ನು ಆಯ್ಕೆ ಮಾಡಲಾಯಿತು. ಐದು ವಿಭಾಗಗಳೂ ಅಂಗಳದಲ್ಲಿ ಐದು ಗುಂಪುಗಳಾಗಿ ಕೂತು ಹಾಡತೊಡಗಿದಾಗ ಮುದುವತ್ತಿಯ ಜನತೆ ಹೆಂಗಸು ಮಕ್ಕಳು ಮುದುಕದಾರಿಯಾಗಿ ಐದು ಗುಂಪುಗಳಾಗಿ ಹಾಡುಗಳಿಗೆ ಕಿವಿ ಕೊಡುತ್ತಿದ್ದರು. ತಮ್ಮ ಬದುಕಿನ ಕಷ್ಟಕೋಟಲೆ ವಾಸ್ತವಗಳೇ ಹಾಡುಗಳಾಗಿ ಮೊಳಗಿದಾಗ ಜನರ ಕಣ್ಣುಗಳಲ್ಲಿ ತಲ್ಲೀನತೆಯ ಮಿಂಚು ಕಾಣತೊಡಗಿತು.

ಕೆಲಸಗಳ ಮರೆತರು

ಇನ್ನೊಂದು ಕಡೆ ಸರ್ವೆತೋಪಿನ ಪಕ್ಕದ ಹುತ್ತ ಹೊಲದಲ್ಲಿ ರೌಂಡಾಗಿ ಕೂತುಕೊಂಡ ಕಾರ್ಯಕರ್ತರು 'ಶೇಷಗಿರಿಯಪ್ಪನ ಕಗ್ಗೊಲೆ' ನಾಟಕಕ್ಕೆ ಸಿದ್ಧತೆ ನಡೆಸಿದ್ದರು ಹೊಲಗಳಲ್ಲಿ ಕೆಲಸ ಮಾಡುತ್ತಿದ್ದವರು ಕೆಲಸಗಳ ಬಿಟ್ಟು ಈ ವಿಶಿಷ್ಟ ಬಗೆಯ ನಾಟಕ ಪ್ರಾಕ್ಟೀಸನ್ನು ನೋಡುತ್ತಾ ನಿಂತರು.

ಮುದುವತ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಹರಿಜನರು 'ನಮ್ಮವರೇ ಅಂತೆ' ಎಂದುಕೊಂಡು ಇಡೀ ಮನೆಗಳೇ ಖಾಲಿಯಾಗಿ ಮಾರಿಗುಡಿಯ ಅಂಗಳ ಸೇರುತ್ತಿದ್ದರೆ, ಮೇಲು ಜಾತಿಯ ಹೊಲೆಮಾದಿಗರೆಲ್ಲ ಕೂಡಿಕೊಂಡು ಕುಷ್ಣೇಗ ನಿಗೆ ಏನು ಮಾಡಲು ಪ್ಲಾನು ಹಾಕುತ್ತಿದ ಎನ್ನುವ ಕುತೂಹಲಕ್ಕೆ ಬಂದು ಕೂಡುತ್ತಿದ್ದ ರಾತ್ರಿ 10 ಗಂಟೆಯಾದರೂ ಕೆಲವರು ಮೇ ಲಿಲ್ಲ. ಹಾಡುಗಳು ಕಣ್ಣಲ್ಲಿ ನೀರು ತರಿಸುತ್ತಿದ್ದ ಪ್ರಾರಂಭದಲ್ಲಿ ಏನೋ ಎತ್ತೊ ಅಂದ ಕೊ ಅಂಜುತ್ತಿದ್ದ ಜನರು ಹಾಡುಗಳ ಕೇಳು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಜೊತೆ ಆತ್ಮೀಯವಾಗತೊಡಗಿದರು. ಮಾ ದಿನ ಜನಕ್ಕೆ ಆಡುಗಳಿಗಿಂತ ನಾಟಕ ಹೆಚ್ಚು ರ್ಷಕವಾಗಿದ್ದಂತೆ ಕಂಡಿತು. ನಾಟಕ ಪ್ರಾಕ್ಟ ನೋಡಲು ಸೇರುತ್ತಿದ್ದ ಜನ ಶೇಷಗಿರಿಯ ಕೃಷ್ಣೆಗೌಡರನ್ನು ಹತ್ತಿರದಿಂದ ಬಲ್ಲವರಾದ್ದರಿ ನಾಟಕದ ಪಾತ್ರಗಳ ಅಭಿನಯವನ್ನೂ ತಿದ್ದತೊ ಗಿದರು, ಕೃಷ್ಣೇಗೌಡನು ದರ್ಪದ ದೃಶ್ಯವೊ ರಲ್ಲಿ ಸಿಗರೇಟು ಸೇದುತ್ತಿರುತ್ತಾನೆ. ಕೃಷ್ಣೇಗೌ ಪಾತ್ರದ ಈ ಅಭಿನಯವನ್ನು ನೋಡು ನಿಂತಿದ್ದ ಮುದುವತ್ತಿಯ ಯುವಕರೊಬ್ಬ 'ಕೃಷ್ಣೆಗೌಡ ಸಿಗರೇಟು ಸೇದುವುದು ಅ ಹೀಗೆ' ಎಂದು ಮುಂದೆ ಬಂದು ಕೃಷ್ಣೆಗೌ ಗತ್ತನ್ನು ಅಭಿನಯಿಸಿ ತೋರಿಸಿದರು.

ಬರೆದುಕೊಳ್ಳಲಾಗಲಿಲ್ಲ

ನಾನು ಒಂದು ಸಣ್ಣ ಪುಸ್ತಕದಲ್ಲಿ ಎಲ್ಲವನ ಗುರುತು ಹಾಕಿಕೊಳ್ಳುತ್ತಾ ತಿರುಗಾಡುತ್ತಿ ಇಳಿವಯಸ್ಸಿನವರೊಬ್ಬರು ಸಿಕ್ಕಿ ಇದೆಲ್ಲಾ ಏ



ಊರೂರುಗಳ ಮೇಲೆ

ಕಾಲ್ನಡಿಗೆಯಲ್ಲಿ ಬಂದ

ದಲಿತ ಸಂಘರ್ಷ ಸಮಿತಿ

ಜಾಥಾದ

ಸಾಮಾನ್ಯ ದೃಶ್ಯ

…ಚ್ಚರಿಸಿದ ದಲಿತರ ಐತಿಹಾಸಿಕ ಜಾಥಾ

…ನ್ನುವಂತೆ ಸನ್ನೆ ಮಾಡಿದರು. ನಾನು ಉದ್ದಕ್ಕೆ …ಷ್ಣೇಗೌಡ ಗೊತ್ತಾಲ್ಲಾ…'ಎನ್ನುತ್ತಾ ಅವನ …ರುದ್ಧ ನಾವು ಹಾಕಿಕೊಂಡಿರುವ ಕಾರ್ಯಕ್ರಮದ ವಿವರಿಸತೊಡಗಿದೆ. ಪಕ್ಕದಲ್ಲಿದ್ದ ವರೊ …ರು ನನಗೆ 'ಅವನಿಗೆ ಮಾತು ಬರಲ್ಲ ಸ್ವಾಮಿ …ಹಾಗ' ಎಂದಾಗ ನನಗೆ ನಾಚಿಕೆಯಾಯಿತು. …ತರ ಕಷ್ಟಪಟ್ಟು ಸನ್ನೆಗಳಲ್ಲೇ ವಿವರಿಸಲು …ಯತ್ನಿಸಿ ಸೋತೆ ಆದರೆ ಶೇಷಗಿರಿಯಪ್ಪನ …ಲೆ ಮತ್ತು ಕೃಷ್ಣೇಗೌಡನ ದಬ್ಬಾಳಿಕೆಯು …ಲ್ಲ ಸನ್ನೆಗಳಲ್ಲೇ ಮೂಗ ನನಗೆ ಮುಟ್ಟಿಸಿ …ಗ ಅದನ್ನು ಬರೆದುಕೊಳ್ಳಲಾಗಲಿಲ್ಲ.

• ಗೋವಿಂದಯ್ಯ

…ದು ಹುಣಸೆಮರದ ಬೇರುಗಳ ಮೇಲೆ …ಾರು ಜನರಗೊಬ್ಬ ದ್ದಿಸಿಕೊಂಡು ಕೂತು ನೋಡು …ದ್ದರು. ಹೋಗಿ ಪಕ್ಕ ಕೂತ ಕೊಂಡ್ಯ …ಟ್ಟ ಸಣಕಲು ವ್ಯಕ್ತಿ; ಕೃಷ್ಣೇಗೌಡ ನಮ್ಮೂ …ದ್ದರೆ ಅವನನ್ನು ಸುಟ್ಟುಬಿಟ್ಟು ಕಳ್ಳಿನ ಜೊತೆ …ಚಿಕೊಂಡುಬಿಡುತ್ತಿದ್ದೊ ಸ್ವಾಮಿ. ಆ ಹುಣ …ೋಟೆ ಜನಕ್ಕೆ ಯಾಕೆ ಅಷ್ಟು ಭಯವೊ …ತಾಗಲ್ಲಪ್ಪಾ' ಎನ್ನುತ್ತಾ ಬೀಡಿ ಹಚ್ಚತೊಡ …ರು. ಬೆಳಗಿಂದ ನಾಟಕ ಪ್ರಾಕ್ಟೀಸು …ೋಡುತ್ತಾ ಹಾಡುಗಳ ಕೇಳುತ್ತಾ ಊಟ …ೇ ಮರೆತುನಿಂತ ಮಕ್ಕಳನ್ನು ಮನೆಯವರು …ು ಎಳೆದುಕೊಂಡು ಹೋಗುತ್ತಿದ್ದುದ್ದ …ಿಸುತ್ತಿತ್ತು.

ಮೌನ ಪ್ರತಿಭಟನೆ

ಮುದುವತ್ತಿಯ ಎಲ್ಲಾ ಜಾತಿಯ ಜನತೆಗೂ ನಮ್ಮ ಕಾರ್ಯಕ್ರಮ ಮತ್ತು ವಿಚಾರಗಳನ್ನು ಮುಟ್ಟಿಸುವ ಸಲುವಾಗಿ ತಾರೀಖು 8-6-80ರ ರಾತ್ರಿ 9-30 ಗಂಟೆಗೆ ಊರಿನ ಮಧ್ಯಭಾಗ ದಲ್ಲಿ ಜಾಥಾದ ಅಂಗವಾಗಿ ಮೊಟ್ಟಮೊದ ಲಿಗೆ ಹಾಡುಗಳು ಮತ್ತು ನಾಟಕ ಕಾರ್ಯ ಕ್ರಮ ಏರ್ಪಡಿಸಲಾಯಿತು. ಊರಿಗೆ ಊರೇ ಬಂದು ಸೇರಿದಾಗ ಚಿಕ್ಕಮಗಳೂರಿನ ರುದ್ರ ಸ್ವಾಮಿಯವರು "ದಲಿತ ಸಂಘರ್ಷ ಸಮಿತಿ ಎಲ್ಲಾ ಜಾತಿಯ ಬಡವರದು. ಇದು ಎಲ್ಲಾ ಜಾತಿಗಳಲ್ಲೂ ಇರಬಹುದಾದ ಸಾವುಕಾರರ, ಜಮೀನ್ದಾರರ ಮತ್ತು ತುಳಿಯುವವರ ವಿರುದ್ಧ ಹೋರಾಟ ಮಾಡುತ್ತದೆ" ಎಂದು ಹೇಳಿ "ನಾಳೆ ನಿಮ್ಮೂರಿಂದಲೇ ಬೆಂಗಳೂರು ಕಡೆಗೆ ಹೊರಡುವ ಈ ಐತಿಹಾಸಿಕ ಜಾಥಾಕ್ಕೆ ಎಲ್ಲಾ ಜಾತಿಯ ಬಡವರ ಬೆಂಬಲಬೇಕೆಂದು" ಕೇಳಿ ಕೊಂಡರು. ಎರಡು ದಿನಗಳಿಂದ ನಾಟಕ ಮತ್ತು ಹಾಡುಗಳನ್ನು ಪ್ರಾಕ್ಟೀಸು ಮಾಡುವಾಗ ನೋಡಿ ಕೇಳಿದ್ದರೂ ಕೂಡ ಕೃಷ್ಣೇಗೌಡ ಅನಸೂ ಯಮ್ಮನ ಮೇಲೆ ಮಾಡಿದ ಅತ್ಯಾಚಾರ ಮತ್ತು ಅವಳ ತಂದೆ ಶೇಷಗಿರಿಯಪ್ಪನ ಕೊಲೆ ಸನ್ನಿ ವೇಶಗಳು ಊರಿನ ಜನತೆಯ ಮೇಲೆ ಗಾಢ ಪರಿಣಾಮ ಬೀರಿದುವು. ಮೇಲು ಜಾತಿಯ ಜನ ಜಾಥಾದ ಪರವಾಗಿ ಏನೂ ಮಾತಾಡ ದಿದ್ದರೂ ಸಹ ತಮ್ಮಲ್ಲಿದ್ದ ಪುಡಿಕಾಸನ್ನು ಜಾಥಾದ ಖರ್ಚಿಗೆ ಕೊಡುವುದರ ಮೂಲಕ ಕೃಷ್ಣೇಗೌಡನ ವಿರುದ್ಧ ಮೌನವಾಗಿ ಪ್ರತಿಭಟಿ ಸಿದರು. ಕೃಷ್ಣೇಗೌಡನ ಗೂಂಡಾಗಳಿಬ್ಬರು ಕುಡಿದು ಬಂದು ಕಾರ್ಯಕ್ರಮ ಕೆಡಿಸುವ ಯೋಜನೆ ಹಾಕಿಕೊಂಡಿದ್ದು, ಜನರ ನಡುವೆ ಕೂತವರು ಉಸಿರನ್ನು ಬಿಡಲಾಗದೆ ಎದ್ದು ಹೊರಟುಹೋದದ್ದು ಕಾರ್ಯಕರ್ತರಿಗೆ ರಾತ್ರಿಯ ಜೋಕಾಯಿತು. ರಾತ್ರಿ 11 ಗಂಟೆಗೆ ರಾಜ್ಯ ಸಂಚಾಲಕರಾದ ಬಿ. ಕೃಷ್ಣಪ್ಪನವರು ಕಾರ್ಯ ಕರ್ತರನ್ನು ಕುರಿತು ಮಾತನಾಡಿ ಜಾಥಾದಲ್ಲಿ ಕಾರ್ಯಕರ್ತರ ಜವಾಬ್ದಾರಿಗಳ ಬಗ್ಗೆ ವಿವರಿಸಿ ದರು.

ತಾ. 9-6-80ರ ಬೆಳಗ್ಗೆ ಜಾಥಾ ಹೊರಡುವ ಸಿದ್ಧತೆಯಲ್ಲಿ ತೊಡಗಿತು. ಮುದುವತ್ತಿಯ ಕೆಲವು ಯುವಕರು ಬಂದು 'ನಮ್ಮೂರಲ್ಲೂ ಈ ಸಂಘಕಟ್ಟಬೇಕು ಅಂತಿದ್ದೀವಿ ಹೆಂಗೆ ಏನು' ಎಂತಲೂ ಮತ್ತೆ ಕೆಲವರು 'ನೀವು ಮತ್ತೆ ಯಾವಾಗ ಬರ್ತೀರಿ' ಇತ್ಯಾದಿ ಚರ್ಚಿಸುತ್ತಿದ್ದುದು ಕಾಣಿಸಿತು. ಅಲ್ಲೇ ಕೂತು ಬರೆದ ಪ್ಲೆಕಾರ್ಡು ಗಳಿಗೆ ಊರವರು ಸವರಿಕೊಟ್ಟ ಹೊಂಗೆಕಡ್ಡಿ ಗಳನ್ನು ಸಿಕ್ಕಿಸಿ ಹಿಡಿದುಕೊಳ್ಳಲಾಯಿತು.

ಮಧ್ಯಾಹ್ನ 1-30ಕ್ಕೆ ಮಾರಿಗುಡಿಯ ಅಂಗಳ ದಿಂದ ಕಾಲುಕಿತ್ತ 200 ಜನ ಕೆಪ್ಪ ಯುವ ಕರ ದಿಟ್ಟ ಜಾಥಾ ಮುದುವತ್ತಿಯ ಬೀದಿಗಳಲ್ಲಿ ಹೆಜ್ಜೆಯಾಕಿದಂತೆ ಊರವರ ಪ್ರೀತಿಯ ಹೆಜ್ಜೆ ಗಳೂ ಕೂಡಿಕೊಂಡು "ಕೃಷ್ಣೇಗೌಡ ಕೇಡಿ ಹಾಕಿ ಅವನಿಗೆ ಬೇಡಿ" "ಕೊಲೆಗಡುಕ ಕೃಷ್ಣೇ ಗೌಡನಿಗೆ ಗಲ್ಲಾಗಲಿ" "ದಲಿತ ಸಂಘರ್ಷ ಸಮಿತಿಯ ಜಾಥಾಕ್ಕೆ ಜಯವಾಗಲಿ" ಇತ್ಯಾದಿ ಘೋಷಣೆಗಳು ಇಡೀ ಊರನ್ನು ಆಕ್ರಮಿಸಿ ಕೊಂಡವು. ಬೀದಿಗಳಲ್ಲಿ ಎದ್ದ ಕೆಂದೂಳು ದೂರದಲ್ಲಿ ನೋಡುವವರಿಗೂ ಕಾಣುತ್ತಿತ್ತು ಕಲ್ಲುಗಳ ಮೇಲೆ ಕೂತಿದ್ದ ಎರಡು ಮುದಿ ದೇಹಗಳು ಶಬ್ದಕೋಲಾಹಲಕ್ಕೆ ಬೆಚ್ಚಿ ಮಾತಾ ಡಿಕೊಳ್ಳುತ್ತಿದ್ದುವು: ಒಬ್ಬ: ಇದ್ಯಾಕ ಹೀಗೆ ಸದ್ದು ಮಾಡಿಕೊಂಡು ಮೆರವಣಿಗೆ ಮಾಡ್ತಾರೊ? ಇನ್ನೊಬ್ಬ: ಆ ಕೃಷ್ಣೇಗೌಡ ಒಳ್ಳೆ ಕೆಲ್ಸ ಮಾಡ ನಲ್ಲಪ…ಅದ್ಕ…



ಹಾಡು ಘೋಷಣೆಗಳಿಗೆ ತತ್ತರಿಸಿದ ಹುಣಸಿಕೋಟೆ

ಹೆಜ್ಜೆಗಳು ಹುಣಸೀಕೋಟೆ ರಸ್ತೆಯಲ್ಲಿ ಆವರಿಸಿಕೊಂಡಾಗ ಸುಡುಬಿಸಿಲು. ಮುದುವತ್ತಿಯು ಮುಟ್ಟ್ವ ಹೆಜ್ಜೆಗಳು ಫರ್ಲಾಂಗು ದೂರ ಬಂದು ಮುಂದೆ ಬರಲಾಗದ್ದಕ್ಕೆ ಕ್ಷಮೆ ಕೇಳುವಂತೆ ನೋಡುತ್ತಾ ನಿಂತವು. ಒಂದಷ್ಟು ಎಳೆಯ ಕೈಗಳು ನಮ್ಮ ಕಡೆ ಪ್ರೀತಿಯಿಂದ ಬೀಸುತ್ತಿರುವುದು ಕಾಣುತ್ತಿತ್ತು. ಘೋಷಣೆಗಳೊಂದಿಗೆ ಸಾಲಾಗಿ ನಡೆಯುತ್ತಿದ್ದ ಕಾರ್ಯಕರ್ತರನ್ನು ಲೆಕ್ಕ ಹಾಕಲಾಗಿ 12 ಜನ ಮುದುವತ್ತಿಯ ದಲಿತರೂ ಕೂಡಿಕೊಂಡು ಸಂಖ್ಯೆ ಹೆಚ್ಚಾಗಿತ್ತು. ಯಾರದೋ ಮನೆಕಟ್ಟಲು ಕಲ್ಲು ತುಂಬಿಕೊಂಡು ಹೋಗುತ್ತಿದ್ದ ಲಾರಿಯ ಮೇಲೆ ಕೂತ ಏಳೆಂಟು ಬೆತ್ತಲೆ ಮನುಷ್ಯರು ಕೈಯೆತ್ತಿ "ಕೃಷ್ಣೇಗೌಡ ಕೇಡಿ ಹಾಕಿ ಅವನಿಗೆ ಬೇಡಿ" ಹೇಳುತ್ತಾ ಹೋದರು. ಅಷ್ಟೊತ್ತಿಗೆ ಮುಂದೆ ಕಾಯುತ್ತಾ ನಿಂತಿದ್ದ ಪೋಲೀಸ್ ವ್ಯಾನು ದಾರಿತೋರಿವಂತೆ ಮುಂದೆ ಹೋಗಿಹೋಗಿ ನಿಲ್ಲುತ್ತಿತ್ತು. ನಾಕೈದು ಜನ ಪೋಲೀಸು ಆಫೀಸರುಗಳು ಕೂತ ಒಂದು ಜೀಪು ಹಿಂದುಗಡೆಯಿಂದ 'ನಡೆಯಿರಿ' ಎನ್ನುವಂತೆ ಹಿಂಬಾಲಿಸುತ್ತಿತ್ತು.

ಲೆಕ್ಕ ಕಂಡವನ್ಯಾರು :

ಹಿಂದುಗಡೆ ನಡೆಯುತ್ತಿದ್ದ ನಾನು ಮುದುವತ್ತಿಯ ದಲಿತರೊಬ್ಬರ ಜತೆ ಮಾತನಾಡತೊಡಗಿದೆ. "ನಾವು ನೋಡಿನೋಡಿ ಸಾಕಾಗೊಯ್ತು ಸಾಮಿ ನೀವು ಮಾಡಾದು ಬಾರಿ ಒಳ್ಳೆದು ಇವರಾರೂ ಅಧಿಕಾರಕ್ಕೆ ಬಂದರೆ ಚಂದಾದ್ದೇನೊ ಅನ್ನಿಸ್ತಾದಪ...ಎನ್ನತೊಡಗಿದರು. ದಾರಿಯಲ್ಲಿ ಜಮೀನ್ದಾರ ಕೃಷ್ಣೇಗೌಡನ ಜಮೀನೇನು ಸಿಕ್ಕಿತು. "ಕೃಷ್ಣೇಗೌಡನಿಗೆ ಈ ಜಾಗದಲ್ಲಿ ಎಷ್ಟೆಕರೆ ಇದ್ದದು ಯಜಮಾನ್ರೆ" ಅಂದೆ. ಆ ಲೆಕ್ಕಕಂಡವನ್ಯಾರು ಸ್ವಾಮಿ, ನೋಡಿ ಆ ಗುಡ್ಡ ಕಾಣಿಸ್ತಾದಲ್ಲ ಅಲ್ಲಿತಂಕ ಅವಂದೆ", ಎಂದರು. ನೆನ್ನೆ ಮೊನ್ನೆಯ ಶಿಬಿರದಲ್ಲಿ ನಮ್ಮನ್ನು ನೋಡಿದ್ದ ಮುದುವತ್ತಿಯ ಕೆಲ ಹೆಂಗಸರು ರಸ್ತೆಗೆ ಟಾರು ಹಾಕುತ್ತಿದ್ದರು. ಅವರು ಎಲ್ಲರ ಕಿವಿಯ ಹತ್ತಿರ ಬಂದು "ಮುಂದೆ ಎರಡು ಪೋಲೀಸ್ ವ್ಯಾನು ಹೋಗವೆ ಹುಷಾರು, ಹುಷಾರು" ಎಂದು ಎಚ್ಚರಿಸಿದರು.

ಕೃಷ್ಣೇಗೌಡನ ಕೊಲೆಸುಲಿಗೆಗಳ ಕೋಟೆಯಾದ ಹುಣಸಿಕೋಟೆಯನ್ನು ಕಾಣಲು ಕುತೂಹಲದಿಂದ ಬಿಸಿಲು ಲೆಕ್ಕಿಸದೆ ನಡೆಯುತ್ತಿದ್ದಾಗ ಉದ್ದನೆ ಜುಟ್ಟಿನ ಒಣಕಲು ದೇಹದ ಹಳ್ಳಿಗರೊಬ್ಬರು ಜಾಥಾವನ್ನು ತಡೆದು ನಿಲ್ಲಿಸಿ "ದಯವಿಟ್ಟು ಶನಿಮಹಾತ್ಮನ ಪ್ರಸಾದ ತಗಂಡು ತಾವು ಹೋಗಬೇಕು" ಎಂದು ಕೇಳಿಕೊಂಡರು. ತಕ್ಷಣ ರಸ್ತೆಯ ಪಕ್ಕದಲ್ಲೇ ಇದ್ದ ಒಂದು ಪುಟ್ಟ ದೇವರ ಗೂಡಲ್ಲಿ ಪೂಜೆಮಾಡಿ ಕಾಯಿಹೊಡೆದು ಜಾಥಾದ ಎಲ್ಲರಿಗೂ ಕಡಲೆಪುರಿ ಪ್ರಸಾದ ಹಂಚತೊಡಗಿದರು. ಪಕ್ಕದಲ್ಲೇ ಒಂದು ಹೊಂಗೆಮರದ ಕೆಳಗೆ ಒಂದು ಹೆಂಗಸು ಕಣ್ಣೀರಿಡುತ್ತಾ ಕೂತಿತ್ತು. ಹತ್ತಿರಹೋಗಿ "ಏನೂ ಇದೆಲ್ಲಾ ?" ಅಂತ ಕೇಳಿದೆ. "ಅಯ್ಯೊ ಸ್ವಾಮಿ ಅಲ್ಲಿ ಪೂಜಾ ಮಾಡ್ತಾ ಇರವ್ರು ನನ್ನ ಯಜಮಾನ್ರು...ಕೃಷ್ಣೇಗೌಡ..." ಎಂದು ಹೇಳುತ್ತಿದ್ದಂತೆ ಜಾಥಾ ಹೊರಟುಬಿಟ್ಟಿತು. ಪೂಜೆಮಾಡಿ ಪ್ರಸಾದ ಹಂಚಿದ ವ್ಯಕ್ತಿಕೂಡ ಓಡಿಬಂದು ಜಾಥಾಕ್ಕೆ ಸೇರಿಕೊಂಡರು ನಾನು ಅವರ ಹತ್ತಿರ ಹೋಗಿ 'ನೀವ್ಯಾರು ಏನು' ಕೇಳುತ್ತಾ ನಡೆದೆ. "ನನ್ನದೊಂದು ದೊಡ್ಡ ಕಥೆ..." ಎಂದು ಹೇಳುತ್ತಾ ನಡೆದ ಶಂಭಪ್ಪ ಅವರು "ನನ್ನ ಜಮೀನು ಕಿತ್ಕಳಕ್ಕಾಗಿ ಕೃಷ್ಣೇಗೌಡ ನನ್ನ ಹೆಂಡ್ತಿ (ಮರದ ಕೆಳಗೆ ಅಳುತ್ತಿದ್ದವರು) ಮತ್ತು ಮಗನ ಬಟ್ಟೆಬಿಚ್ಚಾಕಿ ಎದುರಾಬದರಾ ಮರಕ್ಕೆ ಕಟ್ಟಾಕಿ ಹೊಡೆದ ಸ್ವಾಮಿ...ಇನ್ನೂ ಆ ಭೂಮಿ ನನ್ನ ಕೈಹತ್ತಿಲ್ಲ...ಕೊಲೆ ಮಾಡ್ತಿನಿ ಅಂತ ಬೇರೆ ಹೆದರಸ್ತಾ ಅವ್ನೆ..." ಇತ್ಯಾದಿ ಹೇಳುತ್ತಿದ್ದ ಶಂಬಪ್ಪನ ಬಾಯಲ್ಲಿ ಸರಿಯಾಗಿ ಮಾತುಗಳೇ ಹೊರಡುತ್ತಿರಲಿಲ್ಲ. ಅಷ್ಟೊತ್ತಿಗೆ ಕಲ್ಲಿನ ಬೆಟ್ಟಗಳು ನಮ್ಮನ್ನು ಆವರಿಸಿಕೊಳ್ಳತೊಡಗಿದುವು ನಮ್ಮಲ್ಲೇ ಕೆಲವರು "ಹುಣಸಿಕೋಟೆ" ಅಂಥ ಉದ್ಗಾರ ತೆಗೆದಾಗ "ಕೃಷ್ಣೇಗೌಡ ಕೇಡಿ ಹಾಕಿ ಅವನಿಗೆ ಬೇಡಿ" ಇತ್ಯಾದಿ ಘೋಷಣೆಗಳು ಬೆಟ್ಟಗಳನ್ನು ಜಾಡಿಸತೊಡಗಿದುವು. ಹುಣಸೆಕೋಟೆ ಇನ್ನೂ ಒಂದು ಫರ್ಲಾಂಗು ಇದೆ ಅನ್ನುವಾಗಲೇ ಊರ ಕಡೆಯಿಂದ ಪ್ಯಾಂಟು ಹಾಕಿಕೊಂಡಿದ್ದ ಒಬ್ಬ ವ್ಯಕ್ತಿ ಓಡೋಡಿ ಬರುತ್ತಿದ್ದ. ಹತ್ತಿರ ಬಂದವನೆ ನಡುಗುತ್ತಿದ್ದ ಸ್ವರದಲ್ಲಿ "ಇಲ್ಲೇ ಸಾರ್ ನಮ್ಮಪ್ಪನ ಕೊಲೆ ನಡೆದದ್ದು" ಎಂದು ರಸ್ತೆಯಲ್ಲೇ ಒಂದು ಮಣ್ಣಿನ ದಿಬ್ಬದಂತ ಜಾಗತೋರಿಸಿ ಕಣ್ಣೀರು ಹಾಕುತ್ತಾ ನಿಂತುಬಿಟ್ಟ. ಆತ ಕೊಲೆಯಾದ ಶೇಷದಿರಿಯಪ್ಪನ ಮಗ ಕೃಷ್ಣಪ್ಪ ಎಂದು ಗೊತ್ತಾಯಿತು. ಘೋಷಣೆಗಳ ನಡುವೆ ಶೇಷಗಿರಿಯಪ್ಪ ಕೊಲೆಯಾದ ಜಾಗದಲ್ಲಿ ಪಂಜು ಹತ್ತಿಸಲಾಯಿತು. ಉರಿವ ಪಂಜಿನೊಂದಿಗೆ ಮುನ್ನಡೆದ ಜಾಥಾ, ಹುಣಸೆಕೋಟೆ ಮುಟ್ಟಿದಾಗ ಎಲ್ಲರ ಕಣ್ಣೊಳಗೆ ಪಂಜುಗಳು ಉರಿಯುತ್ತಿದ್ದವು. ಧಿಕ್ಕಾರಗಳಿಗೆ ಅಡ್ಡಲಾಗಿ ಪೋಲೀಸರ ಸಾಲುಸಾಲೇ ನಿಂತಿತ್ತು. ಹಿಂದುಗಡೆ ಜನ ಕಲ್ಲಿನಂತೆ ಮಿಸುಕಾಡದೆ ನೋಡುತ್ತಾ ನಿಂತಿದ್ದರು ಹಾಡುಗಳು ಘೋಷಣೆಗಳಿಗೆ ಹುಣಸಿಕೋಟೆ ತತ್ತರಿಸತೊಡಗಿತು. ಮನೆಯ ಮುಂದೆ ಜಾಥಾ ನಿಲ್ಲಿಸಿ ಕಣ್ಣೀರು ಮರೆಸಿಕೊಂಡು ಅನುಸೂಯಮ್ಮ ಎಲ್ಲರಿಗೂ ಪಾನಕ ಹಂಚುತ್ತಿದ್ದಳು. ಕೊಲೆಯ ರಾತ್ರಿ ಮುರಿದುಹೋದ ಬಾಗಿಲಲ್ಲಿ ನಿಂತ ಶೇಷಗಿರಿಯಪ್ಪನ ತಂದೆ-ತಾಯಿ, ಸೊಸೆ ಮೊಮ್ಮಕ್ಕಳು ಕಣ್ಣೀರಲ್ಲಿ ಬಿಕ್ಕಳಿಸುತ್ತಾ ನಿಂತಿದ್ದರು. ಕೈಗೆ ಮಚ್ಚಿನ ಏಟು ಬಿದ್ದು ಬ್ಯಾಂಡೇಜು ಹಾಕಿಸಿಕೊಂಡಿರುವ ಶೇಷಗಿರಿಯಪ್ಪನ ತಾಯಿಯನ್ನು ನಾನು ಎಷ್ಟೇ ಮಾತನಾಡಿಸಿದರೂ ದುಃಖದಿಂದ ಮಾತುಗಳು ಹೊರಡಲಿಲ್ಲ. ಬಾಗಿಲ ಕಲ್ಲಮೇಲೆ ಕಣ್ಣೀರು ತುಂಬಿಕೊಂಡು ಕೂತಿದ್ದ ಶೇಷಗಿರಿಯಪ್ಪನ ವೃದ್ಧ ತಂದೆಗೆ ನಾನು "ದುಃಖಪಡಬೇಡಿ ಶೇಷಗಿರಿಯಪ್ಪನ ಪ್ರಾಣಕ್ಕೆ...ನಾವು...ಏನೂ ಎಂದು ಸಮಾಧಾನ ಹೇಳತೊಡಗಿದಾಗ ಅವರ ಹೆಂಡತಿ ನನ್ನ ಮಾತುಗಳನ್ನು ಅರ್ಧಕ್ಕೆ ತಡೆಯುತ್ತಾ ತನ್ನ ವೃದ್ಧ ಗಂಡನಿಗೆ "ಏನೂ ಇಲ್ಲ...ಶೇಷಗಿರಿ ಬತ್ತಾನೆ...ಬತ್ತಾನೆ...ಎಂದು ಹೇಳುತ್ತಾ ಜೋರಾಗಿ ಅಳತೊಡಗಿದರು. ಕೋಲಾರ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರೊಬ್ಬರು ಅರ್ಥವಾಗದೆ ನಿಂತಿದ್ದ ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ವಿಷಯ ತಿಳಿಸಿದಾಗ ನನ್ನ ಕಣ್ಣಲ್ಲೂ ನೀರು ಇಳಿಯ ತೊಡಗಿತು. ಮಾನಸಿಕ ಆಘಾತಕ್ಕೆ ಒಳಗಾದಿರುವ ಶೇಷಗಿರಿಯಪ್ಪನ ತಂದೆಗೆ ಕೊಲೆಯಾದದ್ದು ತಿಳಿದಿಲ್ಲವೆಂದೂ ಅವರು "ಶೇಷಗಿರಿ ಎಲ್ಲಿ ?" ಅಂಥ ಕೇಳಿದಾಗ ಮನೆಯವರು "ಅವನು ಇಂದಿರಾಗಾಂಧಿ ಮನೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಇನ್ನೇನೂ ಬರುತ್ತಾನೆ" ಎಂದು ಹೇಳಿ ಅವರನ್ನು ಸಮಾಧಾನಪಡಿಸುತ್ತಿರುವರೆಂದು ತಿಳಿಯಿತು.

ಘೋಷಣೆ, ಧಿಕ್ಕಾರಗಳಿಗೆ ಕಿವುಡಾಗಿ ಕಲ್ಲಿನಂತೆ ನಿಂತಿದ್ದ ಹುಣಸಿಕೋಟೆಯ ಕೆಲವು ಪ್ರಜೆಗ

ಳನ್ನು ಮಾತಾಡಿಸಲು ಯತ್ನಿಸಿ ಸೋತೆ. ಅವರ ಮುಖದ ಮೇಲೆ ಸ್ಮಶಾನ ಮೌನ ಆವರಿಸಿಕೊಂಡಿತ್ತು. ಅನುಸೂಯಮ್ಮ ಉರಿಯುತ್ತಿದ್ದ ಪಂಜನ್ನು ಕೈಗೆ ತೆಗೆದುಕೊಂಡಾಗ ಜಾಥಾ ಮುನ್ನಡೆಯಿತು. ಊರ ಪಕ್ಕದಲ್ಲೇ ಶೇಷಗಿರಿಯಪ್ಪನನ್ನು ಬಲಿತೆಗೆದುಕೊಂಡ 27 ಗುಂಟೆಗೆ ಫಲವತ್ತಾದ ಭೂಮಿ ಇದೆ. ಎಚ್. ಎಂ. ಕೃಷ್ಣಪ್ಪ ಎಂಬುವವನಿಂದ ಕೃಷ್ಣೇಗೌಡ ತನ್ನ ಸೂಳೆಗೆ ತೆಗೆದುಕೊಡಬೇಕೆಂದಿದ್ದ ಈ ಭೂಮಿಯನ್ನ ಶೇಷಗಿರಿಯಪ್ಪ ಕೊಂಡುಕೊಂಡ ಮಹಾಪರಾಧವೇ ಶೇಷಗಿರಿಯಪ್ಪನ ಕೊಲೆಗೆ ಕಾರಣವಾಗಿತ್ತು. ಈಗ ಅದೇ ಭೂಮಿಯಲ್ಲಿ ಶೇಷಗಿರಿಯಪ್ಪನ ಸಮಾಧಿ ಕಾಣುತ್ತಿತ್ತು. ಸಮಾಧಿಯ ಎದುರು ಎರಡು ನಿಮಿಷ ಸಂತಾಪ ಸೂಚಕವಾಗಿ ಮೌನ ಆಚರಿಸಲಾಯಿತು. ಮತ್ತೆ ಪೋಲೀಸರ ಲಾರಿಗಳು ಜಾಥಾವನ್ನು ಹಿಂಬಾಲಿಸಿದುವು. ಕೊಲೆಗಡುಕ ಕೃಷ್ಣೇಗೌಡನಿಗೆ ಶಾಮೀಲಾಗಿರುವ ಪೋಲೀಸು ಸರ್ಕಾರದ ವಿರುದ್ಧ ಘೋಷಣೆಗಳು ಮೊಳಗಿದಂತೆ ಹುಣಸಿಕೋಟೆ ಹಿಂದ ಹಿಂದಕ್ಕೆ ಸರಿಯುತೊಡಗಿತು.

ಮುಂದೆ ಸಿಕ್ಕಿದ ಟೇಕಲ್ಲಿನಲ್ಲಿ ಸಂತೆಗೆ ಬಂದಿದ್ದ ಸಾವಿರಾರು ಜನ ಜಾಥಾದ ಮೆರವಣಿಗೆ ಸೇರಿಕೊಂಡು ಶೇಷಗಿರಿಯಪ್ಪನ ಕೊಲೆಗೆ ಧಿಕ್ಕಾರ ಹಾಕಿದರು. ರಸ್ತೆ ಪಕ್ಕದಲ್ಲಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ ಚಂಬೆ ಮುನಿವೆಂಕಟಪ್ಪ ಆರ್. ವೆಂಕಟರಾಮಯ್ಯ ಜಗನ್ನಾಥ್ ಮತ್ತು ತ್ಯಾಗಿ ಅವರು ಮಾತನಾಡಿ ಕೃಷ್ಣೇಗೌಡನ ದಬ್ಬಾಳಿಕೆ ವಿರುದ್ಧ ಎಲ್ಲಾ ಜಾತಿಯ ಬಡವರು ಸೇರಿ ಹೋರಾಡಬೇಕೆಂದರು. ಹಾಡುಗಳು ಮತ್ತು ಶೇಷಗಿರಿಯಪ್ಪನ ಕಗ್ಗೊಲೆ ನಾಟಕ ನೋಡುವವರ ಕಣ್ಣುಗಳಲ್ಲಿ ನೀರು ತರಿಸಿತು, "ಟೇಕಲ್ಲಿನಲ್ಲಿ ಅದ್ಯಾಗೆ ಆ ಹೊಲೆಮಾದಿಗರು ಸಭೆ ನಡೆಸುತ್ತಾರೆ ನೋಡುವಾ ಎಂದು ಸುದ್ದಿ ಮಾಡಿದ್ದ ಕೃಷ್ಣೇಗೌಡನ ಗೂಂಡಾಗಳು ಜನರ ಧಿಕ್ಕಾರಗಳ ನಡುವೆ ಕಾಣೆಯಾಗಿದ್ದರು.

ಜಾಥಾ ಕೊಂಡಶೆಟ್ಟಿಹಳ್ಳಿಯನ್ನು ಮುಟ್ಟಿದಾಗ ರಾತ್ರಿ. ಊರು ಮಲಗಿಕೊಳ್ಳಲು ರೆಡಿಯಾಗುತ್ತಿತ್ತು. ದಲಿತರ ಘೋಷಣೆಗಳಿಗೆ ಎದ್ದ ಜನ ಬೀದಿಗಿಳಿಯತೊಡಗಿದರು. ಮುಸ್ಲಿಮರೇ ಹೆಚ್ಚಾಗಿರುವ ಇಲ್ಲಿ ಕೃಷ್ಣೇಗೌಡನ ದಬ್ಬಾಳಿಕೆಯನ್ನು ಪ್ರಶ್ನಿಸಿದ್ದ ಬಂಡಾಯಗಾರ ಮುಸ್ಲೀಮರೊಬ್ಬರು ನಾವು ಇಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು.

ಮೊದಲು ಅನುಮಾನಗಳಿಂದ ನೋಡಿದ ಜನ ಬೆಳಿಗ್ಗೆ (10-6-80) ನಡೆದ ಸಾಂಸ್ಕೃತಿಕ ಕಾರ್ಯಕ್ರಮದಿಂದ ಹತ್ತಿರವಾಗತೊಡಗಿದರು. ಜಾಥಾ ಮುಂದಕ್ಕೆ ಹೋಗಲು ರೆಡಿಯಾದಾಗ ಕೆಲವು ಮುಸ್ಲಿಂ ಗೆಳೆಯರು ಬಂದು ಕೈಕುಲುಕಿದರು.

ಸುಡುಬಿಸಿಲಲ್ಲಿ ನಡೆದು ಕುಂತೂರಿನ ತೋಪಿನಲ್ಲಿ ನೋವಿನ ಹಾಡು ಹೇಳಿ ನೀರುಕುಡಿದು ಮುಂದೆ ನಡೆದಾಗ ಅನುಸೂಯಮ್ಮನ ಕಾಲುಗಳಲ್ಲಿ ಬೊಬ್ಬೆ ಬಂದು ಕುಂಟತೊಡಗಿದಳು. ಬಸ್ಸು ಹತ್ತಿಸಲು ಎಷ್ಟೇ ಪ್ರಯತ್ನಪಟ್ಟರೂ ಜಾಥಾದ ಸಾಲಿನಿಂದ ಆಕೆ ಕದಲಲಿಲ್ಲ. ಕೃಷ್ಣೇಗೌಡ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿರುವ ಮಾಲೂರು ಸಿಕ್ಕಾಗ ಯುವಕರ ಕಾಲಲ್ಲಿ 28 ಕಿ.ಮೀ. ಸವೆದು ಹೋಗಿದ್ದವು. ಗಾಯಕ್ಕೆ ಬ್ಯಾಂಡೇಜು ಕಟ್ಟಿಸಿಕೊಂಡು ಇಷ್ಟು ದೂರ ನಡೆದಿದ್ದ ಕಾರ್ಯಕರ್ತರೊಬ್ಬರ ಕಾಲು ವಿಪರೀತ ಊದಿಕೊಂಡು ಮುಂದೆ ನಡೆಯಲಾಗಲಿಲ್ಲ. ಮತ್ತೊಬ್ಬರ ಮೈಯಲ್ಲಿ ಜ್ವರ ಕಾಣಿಸಿಕೊಂಡು ಆಸ್ಪತ್ರೆಗೆ ಸೇರಿಸಯಲ್ಲಿ ಹರಿಜನ-ಗಿರಿಜನ ಅಭಿವೃದ್ಧಿ ಸಂಘ ಸೇರಿಕೊಂಡಿತ್ತು. ಹಾಡು ಮತ್ತು ನಾಟಕದ ನಂತರ ಜಾಥಾದ ಬಗ್ಗೆ ಬಿ. ಕೃಷ್ಣಪ್ಪ ಮಾತಾಡುತ್ತಿದ್ದಾಗ ಜನರ ನಡುವೆ ಕಷ್ಟಪಟ್ಟು ನುಗ್ಗಿ ಬಂದು ಕೈಗೆ ಪುಟ್ಟ ಮಲ್ಲಿಗೆ ಹೂವಿನ ಸರ ಕೊಟ್ಟ ಒಬ್ಬ ವ್ಯಕ್ತಿ ಮಾತು ಬರದ ಮೂಗ. ಕಾರ್ಯಕರ್ತರೊಬ್ಬರ ಕಾಲು ನೋವಿಗೆ ಔಷದಿ ಹಾಕಿದ ಡಾಕ್ಟರು ಕಾಸು ತೆಗೆದುಕೊಳ್ಳದೆ 'ಇದು ನನ್ನ ಕಾಂಟ್ರಿಬ್ಯೂಷನ್' ಎಂದರು. ಕೆ. ಆರ್. ಪುರಂನಲ್ಲಿ ಸಿ. ಐ ಟಿ ಯು. ಕಾರ್ಮಿಕರು ಕೆಂಬಾವುಟ ಹಿಡಿದು ಜಾಥಾವನ್ನು ಸ್ವಾಗತಿಸಿದರು. ಬಹಿರಂಗ ಸಭೆಯಲ್ಲಿ ಎಂ. ಕೆ. ಭಟ್ ಮಾತನಾಡಿ ದ.ಸಂ.ಸ. ಹೋರಾಟಕ್ಕೆ ಕಾರ್ಮಿಕರೆಲ್ಲರ ಬೆಂಬಲ ಇದೆ ಎಂದರು. ಗಿರಿಯಪ್ಪ, ಹರಿಹರ ಆನಂದ ಮತ್ತು ಗೋವಿಂದಯ್ಯ ಜಾಥಾ ಕುರಿತು ಮಾತನಾಡಿದರು. ಹಾಡು ಮತ್ತು ನಾಟಕನೋಡಿ ಪೋಲೀಸರೂ ಕಾಸುಕೊಟ್ಟಿದ್ದು ಇಲ್ಲಿನ ವಿಶೇಷ ಇಲ್ಲೇ ತಂಗಿದ್ದು ಬೆಳಿಗ್ಗೆ (12-6-80) ಬೆಂಗಳೂರು ಕಡೆ ನಡೆದ ಜಾಥಾಕ್ಕೆ ಫ್ಯಾಕ್ಟರಿಗಳ ಕಿಟಕಿಗಳಿಂದ ಕಾರ್ಮಿಕರು ಕೈಬೀಸು

ಜನಭರಿತ ಬೀದಿಗಳಲ್ಲಿ ಬುಸುಗುಟ್ಟಿದ ಜಾಥಾ

ಲಾಯಿತು. ರಸ್ತೆ ಬದಿಯ ಹುಣಸೆಮರದಡಿ ಸ್ವಲ್ಪಕಾಲ ಉಸಿರುತೆಗೆದುಕೊಂಡು ಎದ್ದುನಿಂತ ಜಾಥಾ ಮಾಲೂರಿನ ಜನಭರಿತ ಬೀದಿಗಳಲ್ಲಿ ಬುಸುಗುಟ್ಟಿತು. ಕಿಕ್ಕಿರಿದ ಬಹಿರಂಗ ಸಭೆಯಲ್ಲಿ ಶಂಕರಲಿಂಗೆಗೌಡ, ಗಂಗಯ್ಯ, ಸಿದ್ಧಲಿಂಗಯ್ಯ, ಬಿ. ಕೃಷ್ಣಕೃಷ್ಣ ಮತ್ತು ದೇವನೂರು ಮಹಾದೇವ ಇವರುಗಳು ಮಾತನಾಡಿ ನಾವು ನಿವೇಲ್ಲ ಶೇಷಗಿರಿಯಪ್ಪನವರಾಗುವ ಮೊದಲೇ ಎಚ್ಚೆತ್ತು ಹೋರಾಡಬೇಕೆಂದು ಕರೆಕೊಟ್ಟರು. ನಿಲ್ಲಲು ಜಾಗ ಸಾಲದೆ ಜನ ಮನೆಗಳ ಮೇಲೆ ಹತ್ತಿಕೂತು ನಾಟಕ ನೋಡಿದರು. ಭೀಕರ ಸರ್ವೆ ತೋಪುಗಳ ಕತ್ತಲ ನಡುವೆ 7 ಕಿ. ಮೀ. ನಡೆದ ಮೇಲೆ ಜಡಿಗೇನಹಳ್ಳಿಯ ದಲಿತರು ರಾತ್ರಿ 10-45ಕ್ಕೆ ತಮಟೆ ಮತ್ತು ಶಹನಾಯಿ ವಾದ್ಯದೊಂದಿಗೆ ಸ್ವಾಗತಿಸಿ ಮಲಗಿದ್ದ ಊರನ್ನು ಎಳಿಸಿದರು. 11-6-80ರ ಬೆಳಿಗ್ಗೆ ಹಾಡು ಮತ್ತು ನಾಟಕಗಳ ಕಾರ್ಯಕ್ರಮಕೊಟ್ಟು ಹೊರಟಾಗ ಊರಿಗೆ ಊರೇ ಬಂದು ಕಳಿಸಿಕೊಟ್ಟಿತು.

ಬೆಂಗಳೂರು ಜಿಲ್ಲೆಯ ಹೊಸಕೋಟೆಯಲ್ಲಿ 'ಹಿಂದೆ ಎಂದೂ ನಡೆಯದ ರೀತಿ' ನಡೆದ ಮೆರವಣಿಗೆತ್ತಿರುವುದು ಕಾಣಿಸಿತು ಬೆಂಗಳೂರು ಹೊರವಲಯದ ಹಾಸ್ಟಲೊಂದರ ಅಂಗಳಲ್ಲಿ ದಣಿವಾರಿಸಿಕೊಂಡ ಕಾರ್ಯಕರ್ತರ ಕಾಲುಗಳಲ್ಲಿ ಬೊಬ್ಬೆ ತುಂಬಿಕೊಂಡಿದ್ದವು. ಊರೂರ ಮೇಲೆ ಜನ ಕೊಟ್ಟ ಪುಡಿಕಾಸು ಹೊತ್ತು ಬೆನ್ನು ನೋವಾಗಿ ಒಬ್ಬರೂ ಮಲಗಿದ್ದರು.

ಮಧ್ಯಾಹ್ನ 1 ಗಂಟೆಗೆ ಪ್ಲೆಕಾರ್ಡುಗಳನ್ನು ಕೈಗೆತ್ತಿಕೊಂಡು ಕಾರ್ಯಕರ್ತರು ಎದ್ದು ನಿಂತಾಗ ಉರಿವ ಪಂಜು ಹಿಡಿದ ಅನುಸೂಯಮ್ಮ ಮುಂದೆ ನಿಂತಳು. ಬೊಬ್ಬೆ ಕಾಲುಗಳು ಬೆಂಗಳೂರು ರಸ್ತೆಗಳನ್ನು ಮುತ್ತಿಕ್ಕತೊಡಗಿದಾಗ ಸಿಡಿದ ಘೋಷಣೆಗಳು ಬಡ ಶೇಷಗಿರಿಯಪ್ಪನನ್ನು ಕೊಂದ ಕೊಲೆಗಡುಕ ಸರ್ಕಾರದ ಕೊರಳು ಹುಡುಕಿದುವು. "ನ್ಯಾಯಕ್ಕಾಗಿ ಬಂದಿದೆ ಸಂಘರ್ಷ ಸಮಿತಿ ಜಾಥಾ" "ಕೊಲೆಗಡುಕ ಕೃಷ್ಣೇಗೌಡನಿಗೆ ಗಲ್ಲಾಗಲಿ" "ಕೃಷ್ಣೇಗೌನಿಗೆ ಸಿಕ್ಕಿರುವ ನಿರೀಕ್ಷಣಾ ಜಾಮೀನು ರದ್ದಾಗಲಿ" "ದಲಿತರನ್ನು ಸುಟ್ಟಬೆಂಕಿ ದೇಶವನ್ನು ಸುಡುತ್ತದೆ"

(ಕಡೇ ಪುಟ ನೋಡಿ)

ಪೋಲೀಸು ದೌರ್ಜನ್ಯಕ್ಕೆ ಪತ್ರಿಕೆಗಳ ಖಂಡನೆ

ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ನಡೆದ ಪೋಲೀಸು ಲಾಠಿ ಪ್ರಹಾರದ ಅಮಾನುಷ ಹಲ್ಲೆಯ ಬಗ್ಗೆ ಅನೇಕ ಪತ್ರಿಕೆಗಳು ಅಗ್ರಲೇಖನ-ಸಂಪಾದಕೀಯ ಬರೆದು ಖಂಡಿಸಿದವು. ಅವುಗಳ ಆಯ್ದ ಕೆಲವು ಸಾಲುಗಳಿವು.

ಶೇಷಗಿರಿಯಪ್ಪನ ಕೊಲೆ, ತುಳಿತಕ್ಕೆ ಈಡಾದ ಇಡೀ ದುರ್ಬಲ ವರ್ಗದ ಮೇಲೆ ನಡೆಯುತ್ತಿರುವ ನಿರಂತರ ಅತ್ಯಾಚಾರದ ಸಂಕೇತ. ಈ ವಿಷಯ ಕುರಿತು ತಮ್ಮ ಅಳಲು ತೋಡಿಕೊಳ್ಳಲು ಕೋಲಾರ ಜಿಲ್ಲೆಯಿಂದ ಬಂದ ಮುನ್ನೂರು ಮಂದಿ ಯುವಜನರಿಗೆ ಸಿಕ್ಕಿದ್ದು ದೊಣ್ಣೆ ಏಟು. ಎಂಥ ಪರಮ ಅನ್ಯಾಯ! ಜನತಂತ್ರ ವ್ಯವಸ್ಥೆಯಲ್ಲಿ ಜನರ ಗೋಳು ಕೇಳದವರು ಮಂತ್ರಿಗಳೇ? ಪರಮಾಧಿಕಾರ ಜನಸ್ತೋಮದಲ್ಲಿ ಓಟಿನ ಬೇಟೆಗಾಗಿ ಮಾತ್ರ ಜನರ ಬಳಿಗೆ ವಿಧಾನ ಸೌಧದ ಪೀಠ ಸಿಕ್ಕಬಿಟ್ಟ ಮೇಲೆ ಜನರೆಲ್ಲೋ, ಮಂತ್ರಿಗಳೆಲ್ಲೋ, ಈ ನಿಸ್ಸೀಮ ನಿರ್ಲಕ್ಷ್ಯ ಅತ್ಯಂತ ಖಂಡನಾರ್ಹ.

ದೀನ ದುರ್ಬಲರ ವಿಷಯದಲ್ಲಿ ಮೊಸಳೆ ಕಣ್ಣೀರು ಸುರಿಸಿದ್ದೂ ಸುರಿಸಿದ್ದೇ. ಅದೆಲ್ಲ ಕಪಟ ನಾಟಕ. ನಿಜವಾದ ಬಣ್ಣ ಈಗ ಮಾತ್ರವೇ ಬಯಲು. ಪೊಳ್ಳು ಭರವಸೆಗಳಿಗೆ ದಲಿತವರ್ಗ ಇನ್ನು ಮಾರು ಹೋಗತಕ್ಕದ್ದಲ್ಲ. ಸಂಘಟನೆಯೊಂದೇ ಬಿಡುಗಡೆಗೆ ದಾರಿ. ಅದೇ ನಿಜವಾದ ಬಲ,

14-6-80 —ಕನ್ನಡಪ್ರಭ

ಗುರುವಾರ ಬೆಂಗಳೂರಿನಲ್ಲಿ ದಲಿತ ಸಂಘರ್ಷ ಸಮಿತಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದಾಗ ಪೋಲೀಸರು ಲಾಠಿ ಉಪಯೋಗಿಸಿದ್ದಾರೆ. ಪ್ರತಿಭಟನೆ ಮಾಡುವ ನಾಗರಿಕರ ಮೇಲೆ ಪೋಲೀಸರು ಹಿಂಸೆ ಉಪಯೋಗಿಸುತ್ತಿರುವುದು ಇದೇ ಮೊದಲಲ್ಲ. ಪ್ರಜೆಗಳಿಗೆ ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ಈದಿನ ಸರ್ಕಾರವೂ ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯವಿದೆ. ಪೋಲೀಸರು ತಮ್ಮ ಕರ್ತವ್ಯವನ್ನು ಕಾನೂನಿನ, ಪ್ರಜಾಪ್ರಭುತ್ವದ ಚೌಕಟ್ಟಿನೊಳಗೇ ನಿರ್ವಹಿಸಬೇಕು.

14-6-80 —ಪ್ರಜಾವಾಣಿ

ಹುಣಸೀಕೋಟೆ ಶೇಷಗಿರಿಯಪ್ಪನ ಕೊಲೆ ಸಂಬಂಧದಲ್ಲಿನ ಆರೋಪಿಗಳ ಗಡೀಪಾರಿಗೆ ಒತ್ತಾಯಿಸಿ ಕೋಲಾರದಿಂದ ನಗರಕ್ಕೆ ಪಾದಯಾತ್ರೆಯಲ್ಲಿ ಆಗಮಿಸಿದ ದಲಿತರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದುದು ನಿಜಕ್ಕೂ ಆತಂಕಕಾರಿ ವಿಷಯ. ಪೋಲೀಸರ ಅಮಾನುಷವರ್ತನೆ ಖಂಡನೀಯ.

ಇಲ್ಲಿ ಈ ರೀತಿಯ ದಮನ ಕಾರ್ಯ ನಡೆಯುತ್ತಿದ್ದಾಗಲೇ ಮುಖ್ಯಮಂತ್ರಿ ಗುಂಡೂರಾಯರು ಹರಿಜನ-ಗಿರಿಜನರ ಕಲ್ಯಾಣದ ಬಗ್ಗೆ ವಿಧಾನ ಮಂಡಲದಲ್ಲಿ ಬಾಯಿತುಂಬ ಮಾತನಾಡುತ್ತಿದ್ದುದೊಂದು ವಿಪರ್ಯಾಸವೇ ಸರಿ. ಆದರೆ ನಾವು ಪ್ರಜಾಪ್ರಭುತ್ವದಲ್ಲಿಲ್ಲ ಎಂಬುದು ಸತ್ಯ ಸಂಗತಿ.

13-6-80 —ಜನವಾಣಿ

ಮುಂದುವರೆದ ಜಾಥಾ....

ಕೊಲೆಗಡುಕರಿಗೆ ಸಾವಿಲಾಗಿರುವ ಕೋರ್ಟು ಪೋಲೀಸು, ಸ ರ್ಕಾ ರ ಕ್ಕೆ ಧಿಕ್ಕಾರ" ಇತ್ಯಾದಿ ಘೋಷಣೆಗಳ ನಡುವೆ ಅನುಸೂಯಮ್ಮನ ಮೇಲೆ ನಡೆದ ಅತ್ಯಾಚಾರ ಕುರಿತ ಹಾಡುಗಳು ಕೇಳುತ್ತಿದ್ದುವು.

ವಿಧಾನಸೌಧದ ಒಳಗೆ ದಲಿತೋದ್ಧಾರದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಹೊರಗಡೆ ಕಬ್ಬನ್ ಪಾರ್ಕನಲ್ಲಿ ನ್ಯಾಯಕೇಳಲು ಬಂದವರ ಬಹಿರಂಗ ಸಭೆಸೇರಿತು. ತನ್ನ ಪರಿಚಯ ಮಾಡಿಕೊಳ್ಳಲು ಎದ್ದುನಿಂತ ಅನುಸೂಯಮ್ಮ ಮಾತುಗಳು ಹೊರಡದೆ ಕಣ್ಣೀರು ಸುರಿಸುತ್ತಾ ಕುಸಿದು ಕೂತಳು. ಒಬ್ಬರು ಪೋಲೀಸು ಅಧಿಕಾರಿ ಬಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪನವರನ್ನು ಮುಖ್ಯಮಂತ್ರಿ ಕಾಣಲು ವಿಧಾನಸೌಧಕ್ಕೆ ಕರೆದುಕೊಂಡು ಹೋದರು. ಅಧ್ಯಕ್ಷರಿಲ್ಲದ ಸಭೆಯಲ್ಲಿ ಖ್ಯಾತ ಸಾಹಿತಿ ಪಿ. ಲಂಕೇಶ್, ಮತ್ತು ಕಾರ್ಮಿಕ ನಾಯಕರುಗಳಾದ ಎಸ್. ಸೂರ್ಯನಾರಾಯಣರಾವ್ ಮತ್ತು ಎಸ್. ವೆಂಕಟರಾಮ್ ಮಾತನಾಡಿ ನ್ಯಾಯಕೇಳುವ ದಲಿತರಿಗೆ ಬೆಂಬಲ ಸೂಚಿಸಿದರು. ಅದೇ ಜಾಗದಲ್ಲಿ ನಡೆದ "ಶೇಷಗಿರಿಯಪ್ಪನ ಕಗ್ಗೊಲೆ" ನಾಟಕ ನೋಡುವವರ ಎದೆಯನ್ನು ನಾಟಿತ್ತು. ಕೆಲವರು ಕರ್ಚೀಫುಗಳಲ್ಲಿ ಕಣ್ಣೀರು ಒರಸಿಕೊಳ್ಳುತ್ತಿದ್ದರು. ನಡುವಯಸ್ಸಿನ ವ್ಯಕ್ತಿಯೊಬ್ಬರು ನನ್ನ ಹತ್ತಿರ ಬಂದು ಕೃಷ್ಣೇಗೌಡನ ಅಡ್ರಸ್ಸು ಕೇಳಿದರು. 'ಯಾಕೆ' ಅಂದೆ 'ಅವನನ್ನ ಹೋಗಿ ತೀರಿಸಬೇಕು ಅಂಥ ಅನ್ನಿಸಿದೆ' ಎಂದ ವ್ಯಕ್ತಿಯ ಕಣ್ಣುಗಳನ್ನು ನೋಡಿದೆ. ನಾಟಕೀಯತೆ ಇದೆ ಅಂಥ ಅನ್ನಿಸಲಿಲ್ಲ.

ಸುಮಾರು ಸಮಯದ ನಂತರ ಬಂದ ಸಂಚಾಲಕ ಬಿ. ಕೃಷ್ಣಪ್ಪ ಮತ್ತು ಗೆಳೆಯರು ವಿಧಾನಸೌಧದಲ್ಲಿ ನಡೆದದ್ದು ಹೇಳಿದರು. ರೊಚ್ಚಿಗೆದ್ದ ಕಾರ್ಯಕರ್ತರು "ದಲಿತರ ಸಮಾಧಿಯ ಮೇಲೆ ದಲಿತೋದ್ಧಾರದ ರಾಜ್ಯ" "ಕೃಷ್ಣೇಗೌಡನನ್ನು ಅರೆಸ್ಟು ಮಾಡಲಾರದ ಷಂಡ ಸರ್ಕಾರವೇ ನಮ್ಮನ್ನಾದರೂ ಅರೆಷ್ಟು ಮಾಡಿ" ಇತ್ಯಾದಿ ಘೋಷಣೆಗಳೊಂದಿಗೆ ಸಾಲಾಗಿ ಶಾಂತಿಯುತವಾಗಿ ವಿಧಾನ ಸೌಧದ ಕಡೆ ನಡೆದರು. ಅಷ್ಟೇ. ಪೋಲೀಸರ ದೊಣ್ಣೆಗಳು ಬೇಟೆಯಾಡತೊಡಗಿದುವು. ಸಾಲುಗಳಿಂದ ಕದಲದೆ ನಿಂತ ಎಚ್ಚೆತ್ತ ಯುವಕರ ಹೋರಾಟದ ಘೋಷಣೆಗಳನ್ನು ಪೋಲೀಸು ದೊಣ್ಣೆಗಳು ಬೇಟೆಯಾಡಲು ಆಗಲಿಲ್ಲ. ಅಮಾನುಷವಾಗಿ ಥಳಿಸಿ ವ್ಯಾನುಗಳಿಗೆ ಎಳೆದು ಹಾಕಲಾಗುತ್ತಿತ್ತು. ಕೊಲೆಯಾದ ತಂದೆಯ ಉರಿವ ಪಂಜು ಹಿಡಿದು ಧಿಕ್ಕಾರ ಕೂಗುತ್ತಿದ್ದ ಅನುಸೂಯಮ್ಮನನ್ನು 'ಗಂಡು' ಪೋಲೀಸುಗಳು ಎಳೆದು ವ್ಯಾನಿಗೆ ಹಾಕುತ್ತಿದ್ದಾಗ ಕಬ್ಬನ್‌ಪಾರ್ಕಿನಲ್ಲಿ ಮಳೆಸುರಿಯುತ್ತಿತ್ತು.

ಧಿಕ್ಕಾರ-ಘೋಷಣೆಗಳಿಂದ ತುಂಬಿ ನಡುಗುತ್ತಿದ್ದ ಪೋಲೀಸ್ ವ್ಯಾನುಗಳು ಮುಂದೆ ಚಲಿಸತೊಡಗಿದಂತೆ 70. ಕಿ.ಮೀ. ನಡೆದು ಊರೂರು ಎಚ್ಚರಿಸಿದ ದಲಿತರ ಐತಿಹಾಸಿಕ ಜಾಥಾ ಪೋಲೀಸು ವ್ಯಾನುಗಳ ಒಳಗೆ ಮುಂದುವರಿಯಿತು.

ಈ ಪತ್ರಿಕೆಯು ರಾಮದೇವ ರಾಕೆಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ: 5ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ.ಬೆಂಗಳೂರ 560002.